**Lang. Code : 07**

इस पुस्तिका में **20** पृष्ठ हैं ।
This booklet contains **20** pages.

# ATA-19-II

**प्रश्न-पत्र II / PAPER II**

**कन्नड़ भाषा परिशिष्ट**

**Kannada Language Supplement**

**भाग IV & V / PART IV & V**

**परीक्षा पुस्तिका संकेत**
**Test Booklet Code**

**E**

**परीक्षा पुस्तिका संख्या**
**Test Booklet No.**

**इस परीक्षा पुस्तिका को तब तक न खोलें जब तक कहा न जाए ।**
**Do not open this Test Booklet until you are asked to do so.**
**इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें ।**
**Read carefully the Instructions on the Back Cover (Page 19 & 20) of this Test Booklet.**

**कन्नड़ में निर्देशों के लिए इस पुस्तिका का पृष्ठ 2 देखें । / For instructions in Kannada see Page 2 of this Booklet.**

## परीक्षार्थियों के लिए निर्देश

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं** ।
2. परीक्षार्थी भाग I एवं भाग II या III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से ।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं । भाषा परिशिष्टों को आप अलग से माँग सकते हैं ।
4. इस पृष्ठ पर विवरण अंकित करने एवं उत्तर पत्र पर निशान लगाने के लिए **केवल काले/नीले बॉल पॉइंट पेन** का प्रयोग करें ।
5. इस भाषा पुस्तिका का **संकेत** है **E** । यह सुनिश्चित कर लें कि इस भाषा परिशिष्ट पुस्तिका का संकेत, उत्तर पत्र के **पृष्ठ-2** एवं मुख्य परीक्षा पुस्तिका पर छपे संकेत से मिलता है । अगर यह भिन्न हो, तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :
   भाग-IV : भाषा-I (कन्नड़) (प्र. 91 से प्र. 120)
   भाग-V : भाषा-II (कन्नड़) (प्र. 121 से प्र. 150)
7. भाग-IV में भाषा-I के लिए 30 प्रश्न और भाग-V में भाषा-II के लिए 30 प्रश्न दिए गए हैं । इस परीक्षा पुस्तिका में केवल कन्नड़ भाषा से संबंधित प्रश्न दिए गए हैं । **यदि भाषा-I और/या भाषा-II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए । जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए ।**
8. **परीक्षार्थी भाग-V (भाषा-II) के लिए, भाषा सूची से ऐसी भाषा चुनें जो उनके द्वारा भाषा I (भाग-IV) में चुनी गई भाषा से भिन्न हो ।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें ।
10. सभी उत्तर केवल OMR उत्तर पत्र पर ही अंकित करें । अपने उत्तर ध्यानपूर्वक अंकित करें । उत्तर बदलने हेतु श्वेत रंजक का प्रयोग निषिद्ध है ।

## *INSTRUCTIONS FOR CANDIDATES*

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Part I, and Part II OR III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Black/Blue Ball Point Pen only** for writing particulars on this page / marking responses in the Answer Sheet.
5. The CODE for this Language Booklet is **E**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Test Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :
   Part-IV : Language I - (Kannada) (Q. 91 to Q. 120)
   Part-V : Language II - (Kannada) (Q. 121 to Q. 150)
7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada language have been given. **In case the language/s you have opted for as Language-I and/or Language-II is a Language other than Kannada, please ask for a Test Booklet that contains questions on that language. The language being answered must tally with the languages opted for in your Application Form.**
8. **Candidates are required to attempt questions in Part -V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

परीक्षार्थी का नाम (बड़े अक्षरों में) : ____________________
Name of the Candidate (in Capitals) :
अनुक्रमांक : (अंकों में) ____________________
Roll Number : in figures
: (शब्दों में) ____________________
: in words
परीक्षा केन्द्र (बड़े अक्षरों में) : ____________________
Centre of Examination (in Capitals) :
परीक्षार्थी के हस्ताक्षर : ____________ निरीक्षक के हस्ताक्षर : ____________
Candidate's Signature : Invigilator's Signature :
Facsimile signature stamp of
Centre Superintendent ____________________

**E**

**Lang. Code : 07**

# ATA-19-II

**ಪ್ರಶ್ನೆ ಪತ್ರಿಕೆ II**
**ಕನ್ನಡ ಭಾಷಾ ಪೂರಕ**
**ಭಾಗ IV & V**

ಪ್ರಶ್ನೆ ಪುಸ್ತಿಕೆ ಸಂಕೇತ

**E**

ಈ ಪ್ರಶ್ನೆ ಪುಸ್ತಿಕೆ **20** ಪುಟಗಳನ್ನು ಹೊಂದಿರುತ್ತದೆ.

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**
**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 & 20) ಗಮನವಿಟ್ಟು ಓದಿರಿ.**
**ಪರೀಕ್ಷಾರ್ಥಿಗಳಿಗೆ ಸೂಚನೆಗಳು:**

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) ಅಥವಾ ಭಾಗ V(ಭಾಷೆ II) ನ್ನು ಕನ್ನಡ ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು ಎರಡನ್ನೂ ಅಲ್ಲ.
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I ಮತ್ತು II ಅಥವಾ III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು ಕೇವಲ **ಕಪ್ಪು / ನೀಲಿ ಬಾಲ್ ಪಾಯಿಂಟ್ ಪೆನ್** ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ ಸಂಕೇತ **E** ಆಗಿದೆ. ಉತ್ತರ ಪತ್ರಿಕೆಯ ಪುಟ-2 ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ ಎರಡು ಭಾಗಗಳಿವೆ IV ಮತ್ತು V, ಇದರಲ್ಲಿ **60** ವಸ್ತುನಿಷ್ಟ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ 1 ಅಂಕ :

   ಭಾಗ IV : ಭಾಷಾ-I (ಕನ್ನಡ) (ಪ್ರಶ್ನೆ 91 ರಿಂದ 120)

   ಭಾಗ V : ಭಾಷಾ-II (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ IV ರಲ್ಲಿ ಭಾಷೆ I ಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ V ರಲ್ಲಿ ಭಾಷೆ II ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. **ಒಂದು ವೇಳೆ ಭಾಷೆ I ಮತ್ತು/ಅಥವಾ II ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು - ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.**
8. ಪರೀಕ್ಷಾರ್ಥಿ ಭಾಗ V (ಭಾಷೆ II) ಕ್ಕಾಗಿ, ಭಾಷೆ I (ಭಾಗ IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ (OMR) ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (Whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) ______________________

ಕ್ರಮ ಸಂಖ್ಯೆ : (ಅಂಕೆಗಳಲ್ಲಿ) ______________________

: (ಅಕ್ಷರಗಳಲ್ಲಿ) ______________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) ______________________

ಪರೀಕ್ಷಾರ್ಥಿಯ ಸಹಿ ______________ ನಿರೀಕ್ಷಕರ ಸಹಿ ______________

Facsimile signature stamp of

Centre Superintendent : ______________________

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-**I** ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-**IV** ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆಸಂಖ್ಯೆ **91 - 120)** ಉತ್ತರಿಸಬೇಕು.

Candidates should attempt the questions from **Part-IV (Q.No. 91-120)**, if they have opted **KANNADA** as **Language-I** only.

## ಭಾಗ-IV

## ಭಾಷೆ-I

## ಕನ್ನಡ

**ಅಭ್ಯರ್ಥಿಗಳು ಕನ್ನಡವನ್ನು ಭಾಷೆ-I ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-IV ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆಸಂಖ್ಯೆ 91 - 120) ಉತ್ತರಿಸಬೇಕು.**

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 91 - 99) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಮತಿ ಮಾನವನ ಸರ್ವೋತ್ಕೃಷ್ಟವಾದ ಆಯುಧ. ಮತಿಯೇ ಕತ್ತಲಲ್ಲಿ ದಾರಿ ತೋರುವ ರತ್ನದ ಕೈದೀವಿಗೆ. ಮತಿಯ ದೆಸೆಯಿಂದಲೇ, ಪ್ರಾಣಿಮಾತ್ರವಾಗುತ್ತಿದ್ದ ನರಜೀವಿ ಮನುಷ್ಯತ್ವಕ್ಕೆ ಏರಿದ್ದಾನೆ. ಮತಿಯ ಕೃಪಾಮಹಿಮೆ-ಯಿಂದಲೇ ನಾವು ಮನುಷ್ಯತ್ವದಿಂದ ದೇವತ್ವಕ್ಕೆ ಏರಬೇಕಾಗಿದೆ. ಮತಿ ಮನುಷ್ಯತ್ವದ ಹಕ್ಕು. ಆ ಹಕ್ಕನ್ನು ಬಿಟ್ಟವನು ಮನುಷ್ಯತ್ವವನ್ನೇ ಕಳೆದುಕೊಳ್ಳುತ್ತಾನೆ. ಆದ್ದರಿಂದ ಸಹೋದರರೇ, ಮತಿ ನಿಮ್ಮ ನಚ್ಚಿನ ರನ್ನ ದೀವಿಗೆಯಾಗಲಿ.

ಸ್ವಲ್ಪವಾಗಿಯೋ ಹೆಚ್ಚಾಗಿಯೋ ಮತಿ ಮನುಷ್ಯ-ರೆಲ್ಲರಲ್ಲಿಯೂ ಇರುತ್ತದೆ. ಆದರೆ ಈಗೇನಾಗಿದೆ ಅದರ ಗತಿ ? ಮೌಢ್ಯದಿಂದಲೂ ಮತಾಚಾರಗಳಿಂದಲೂ ಸಮಾಜ ಭೀತಿಯಿಂದಲೂ ರಾಜ ಭಯದಿಂದಲೂ ಸ್ವರ್ಗ ನರಕ ದೇವಾನುದೇವತೆಗಳ ಮೋಹ ಮಾಯೆಗಳಿಂದಲೂ ಅದು ಸತ್ವರಹಿತವಾಗಿದೆ; ಕಾಂತೀಹೀನವಾಗಿದೆ. ಚಕ್ರವರ್ತಿಯಂತೆ ಸಿಂಹಾಸನದಲ್ಲಿ ಮಂಡಿಸಬೇಕಾದುದು ತೊತ್ತಾಗಿ ಕಾಲೊತ್ತಬೇಕಾಗಿದೆ. ಎಂದರೆ ಮತಿಗೆ ಅಂಕುಶಗಳು ಅತಿಯಾಗಿ ಹೋಗಿ ಜೀವವೆ ನಿಸ್ತೇಜವಾಗಿದೆ. ಆದರೆ ಈಗ ನಾವು ಮತ ಎಂದು ಕರೆದುಕೊಳ್ಳುವ ಆಚಾರ ಸಮೂಹ ಬರಿಯ ಸಾಮಾಜಿಕವಾದ ಕಟ್ಟು ಕಟ್ಟಳೆಗಳ ಕಾಟವಾಗಿದೆ. ಒಬ್ಬರನ್ನೊಬ್ಬರು ಮುಟ್ಟದಿರುವುದು, ನೋಡದಿರುವುದು; ಒಬ್ಬರೊಡನೊಬ್ಬರು ಕುಳಿತು ಭೋಜನ ಮಾಡದಿರುವುದು; ನಾಮ ಹಾಕಿಕೊಳ್ಳುವುದು; ವಿಭೂತಿ ಹಚ್ಚಿಕೊಳ್ಳುವುದು, ಮುದ್ರೆ ಹೊಡೆದುಕೊಳ್ಳುವುದು, ಶಿಲುಬೆ ಧರಿಸಿಕೊಳ್ಳುವುದು, ಕೆಲವರನ್ನು ಸಾರ್ವಜನಿಕವಾದ ಬಾವಿ ಕೆರೆಗಳಲ್ಲಿ ನೀರು ತೆಗೆದುಕೊಳ್ಳದಂತೆ ಮಾಡುವುದು; ಕೆಲವರನ್ನು ದೇವಸ್ಥಾನದೊಳಕ್ಕೆ ಸೇರಿಸದಿರುವುದು; ಮತ್ತೆ ಕೆಲವರನ್ನು ಗುಡಿಯೊಳಗೆ ಹತ್ತು ಮಾರು ಮಾತ್ರ ಬರಗೊಡಿಸುವುದು; ಹಾಗೆ ಬರಗೊಡಿಸಬೇಕೇ ಬೇಡವೇ ಎಂದು ಚರ್ಚೆ ನಡೆಸುವುದು; – ಇತ್ಯಾದಿ ಕೆಲಕ್ಕೂ ಬಾರದ, ಶ್ರೇಯಸ್ಕರವೂ ಅಲ್ಲದ ನೂರಾರು ಆಚಾರ ವ್ಯವಹಾರಗಳ ಸಮಷ್ಟಿಯೇ ನಮ್ಮ ಮತದ ಹುರುಳಾಗಿ ಕುಳಿತಿದೆ.

ಇಂತಹ 'ದಿವ್ಯ ದರ್ಶನ'ದ ಪ್ರಾಪ್ತಿಗಾಗಿ ನಮಗೆ ಬೇಕಾಗುವ ಧೀರ, ಸ್ವತಂತ್ರ, ಉದಾರ ಪ್ರತಿಭಾಪೂರ್ಣವಾದ ಬುದ್ಧಿಯನ್ನೆ ನಾನು 'ನಿರಂಕುಶಮತಿ' ಎಂದು ಕರೆದಿದ್ದೇನೆ. ಆದ್ದರಿಂದ ತಮ್ಮ ಮತ್ತು ಜಗತ್ತಿನ ಶ್ರೇಯಸ್ಸನ್ನು ಕೋರುವ ಯುವಕರೆಲ್ಲರೂ 'ನಿರಂಕುಶಮತಿ' ಗಳಾಗಬೇಕು.

'ನಿರಂಕುಶಮತಿ'ಗಳಾಗಬೇಕಾದರೆ ದಾಸ್ಯಬುದ್ಧಿ ತೊಲಗಬೇಕು; ದಾಸ್ಯಬುದ್ಧಿ ತೊಲಗಬೇಕಾದರೆ ಸ್ವತಂತ್ರವಾಗಿ ಜೀವಿಸಲು ಪ್ರಯತ್ನಿಸಬೇಕು; ಎಂದರೆ ಸ್ವಾವಲಂಬನ ಬೇಕು ಎಂದರೆ ಇನ್ನೊಬ್ಬರ ಕೈ ಹಾರೈಸಿ ಹೊಟ್ಟೆ ಹೊರೆಯುವುದು ತಪ್ಪಬೇಕು. ಮುಚ್ಚುಮರೆಯಿಲ್ಲದೆ ಬಿಚ್ಚಿ ಹೇಳುವುದಾದರೆ, ಸಂಪತ್ತು ಬೇಕು, ಹಣ ಬೇಕು; ಉದ್ಯೋಗ ಬೇಕು ಮಿತ್ರರೇ, ನಾನು ಒಪ್ಪಿಕೊಳ್ಳುತ್ತೇನೆ, ಈ ಸಮಸ್ಯೆ ನಿಜವಾಗಿಯೂ ಕಗ್ಗಂಟಾಗಿದೆ. ಆ ಸಮಸ್ಯೆಯನ್ನು ಪರಿಹರಿಸಲೆಂದೇ ದೇಶದ ನಾಯಕರೆಲ್ಲರೂ ಕಷ್ಟಪಡುತ್ತಿದ್ದಾರೆ.

ಕೃತವಿದ್ಯರಾದ ಯುವಕರು ನಾಗರಿಕತೆಯ ಮೆರುಗಿಗೆ ಮನಸೋತು ಪಟ್ಟಣಗಳನ್ನು ಸೇರುತ್ತಿದ್ದಾರೆ. ಅಲ್ಲಿಯೂ ಕೂಡ ಅವರು ಕೈಕೊಳ್ಳುವ ವೃತ್ತಿ ಸ್ವಲ್ಪ ಹೆಚ್ಚು ಕಡಿಮೆ 'ಉತ್ಪತ್ತಿಕಾರಕ'ವಾಗಿರುವುದಿಲ್ಲ; 'ಸಂಗ್ರಹಕಾರಕ'

ವಾಗಿರುತ್ತದೆ. ಹಾಗೆ ಮಾಡುವುದರಿಂದ ಹಲಕೆಲವರಿಗೆ ಅವರವರ ಮಟ್ಟಿಗೆ ನೆಮ್ಮದಿಯಾಗಬಹುದು. ಆದರೆ ಎಲ್ಲರೂ ಎಷ್ಟು ಕಾಲ ತಾನೆ ಸಂಪತ್ತನ್ನು ಸೃಷ್ಟಿಸದೆ ಸಂಗ್ರಹಿಸುತ್ತಲೆ ಹೋಗಲಾಗುತ್ತದೆ ? ಆದ್ದರಿಂದ ಮೇಧಾವಿಗಳಾದ ಯುವಕರು ತಮಗೆ ನವನಾಗರಿಕತೆಯ ಮಾಯಾಸ್ಮಿತರುಚಿ ದೊರಕೊಳ್ಳದಿದ್ದರೂ ಚಿಂತೆಯಿಲ್ಲ ಎಂದುಕೊಂಡು, ಗ್ರಾಮಗಳಲ್ಲಿಯೇ ನಿಂತು ಜನರ ಆಧ್ಯಾತ್ಮಿಕ ಅಜ್ಞಾನವನ್ನೂ ಆಧಿದೈವಿಕ ಮೌಢ್ಯವನ್ನೂ ಆಧಿಭೌತಿಕ ಕಷ್ಟನಷ್ಟಗಳನ್ನೂ ಪರಿಹರಿಸಲು ಪ್ರಯತ್ನಿಸುವ ತಪಸ್ಸನ್ನು ಕೈಕೊಳ್ಳಬೇಕು.

ಮತದ ಹೆಸರಿನಲ್ಲಿ, ಸಮಾಜದ ಕಟ್ಟುಕಟ್ಟಳೆಗಳ ಹೆಸರಿನಲ್ಲಿ, ದೆವ್ವ ಪಿಶಾಚಿ ಗ್ರಹಗಳ ಹೆಸರಿನಲ್ಲಿ, ಮಾಮೂಲುಗಳ ಹೆಸರಿನಲ್ಲಿ ದುರ್ವ್ಯಯವಾಗುತ್ತಿರುವ ಸಂಪತ್ತನ್ನು ತಡೆಗಟ್ಟಿ, ಅದನ್ನು ಹೆಚ್ಚು ಆವಶ್ಯಕವಾಗಿರುವ ಮತ್ತು ಹೆಚ್ಚು ಉಪಯೋಗಕರವಾಗಿರುವ ಜೀವನ ಪಥಗಳಲ್ಲಿ ವಿನಿಯೋಗಿಸುವಂತೆ ಮಾಡಬೇಕು.

ಆದ್ದರಿಂದ ಯುವಕ ಸಹೋದರರೇ, ಯಾವ ಒಂದು ಸಂಪ್ರದಾಯದ ಸಂಕೋಚಕ್ಕೂ ಸಿಕ್ಕಿಕೊಳ್ಳಬಾರದು. ಯಾವ ಒಂದು ಪಂಥದ ಇಕ್ಕಟ್ಟಿಗೂ ಒಳಗಾಗಬಾರದು. ಸರ್ವಧರ್ಮಗಳ ಸಾರವಾದ ಉದಾರ 'ದರ್ಶನ' ವೊಂದನ್ನು ಕಂಡು, ಕಟ್ಟಿಕೊಂಡು ಬಾಳಬೇಕು. ಜಾತಿ ಮತ್ತು ದೇಶ ಕಾಲಗಳ ಭೇದವಿಲ್ಲದೆ ಎಲ್ಲ ಮಹಾಪುರುಷರ ಜ್ಞಾನಗಂಗೆಗಳ ಮಂಗಳಸಂಗಮದಲ್ಲಿ ತೀರ್ಥಸ್ನಾನ ಮಾಡಿ ಪೂರ್ಣ ಜೀವನವನ್ನು ಪೂರ್ಣವಾಗಿ ಅನುಭವಿಸಬೇಕು.

ಸೋದರರೇ, ಅಂತಹ 'ದರ್ಶನ'ದ ಸಂಪಾದನೆ ಅಷ್ಟೇನೂ ದುಸ್ಸಾಧ್ಯವಲ್ಲ. ಮತಭ್ರಾಂತಿಯನ್ನು ಬಿಟ್ಟು ಮತಿಯ ದೀವಿಗೆಯನ್ನು ಕೈಯಲ್ಲಿ ಹಿಡಿದುಕೊಂಡು ಹೊರಡುವ ಸರ್ವರಿಗೂ ಅದು ಸುಲಭಸಾಧ್ಯ.

**91.** **ನಿರಂಕುಶಮತಿಗಳಾಗಬೇಕಾದರೆ ಯಾವುದರಿಂದ ಬಿಡುಗಡೆ ಹೊಂದಬೇಕು :**

(1) ಜ್ಞಾನದಿಂದ

(2) ದಾಸ್ಯದಿಂದ

(3) ವಿವೇಕದಿಂದ

(4) ಜಿಜ್ಞಾಸೆಯಿಂದ

**92.** **ಯುವಕರು ಗ್ರಾಮದಲ್ಲಿ ನೆಲೆನಿಂತು ಏನು ಮಾಡಬೇಕೆಂದು ಸೂಚಿಸಲಾಗಿದೆ :**

(1) ಸಂಪತ್ತನ್ನು ವ್ಯಯ ಮಾಡುವುದು

(2) ಗ್ರಾಮಗಳನ್ನು ತೊರೆದು ಪಟ್ಟಣ ಸೇರುವುದು

(3) ಸಾಮಾಜಿಕ ಕಟ್ಟು ಕಟ್ಟಳೆಗೆ ಬದ್ಧರಾಗಿರುವುದು

(4) ಜನರ ಅಜ್ಞಾನ ಮತ್ತು ಮೌಢ್ಯಗಳನ್ನು ಪರಿಹರಿಸುವುದು

**93.** **ಮತಿಯನ್ನು ನಿರರ್ಥಕಗೊಳಿಸಿರುವ ಬಹುಮುಖ್ಯ ಸಂಗತಿಗಳು :**

(1) ವೈಚಾರಿಕ ನಿಲುವುಗಳು

(2) ಸಮಷ್ಟಿ ಪ್ರಜ್ಞೆ

(3) ಸಾಮಾಜಿಕ ಕಟ್ಟುಪಾಡುಗಳು

(4) ಬೌದ್ಧಿಕ ಸಾಮರ್ಥ್ಯ

**94.** **'ವೈಚಾರಿಕತೆ ' ಎಂಬುದರ ನಿಜವಾದ ಅರ್ಥ :**

(1) ಎಲ್ಲ ವಿಚಾರಗಳನ್ನು ಸೂಕ್ಷ್ಮವಾಗಿ ಒರೆಗೆ ಹಚ್ಚಿನೋಡುವುದು

(2) ಒಬ್ಬರನ್ನೊಬ್ಬರು ಮುಟ್ಟದಿರುವುದು

(3) ಆಚಾರ, ಮಡಿವಂತಿಕೆಯನ್ನು ಪ್ರತಿಪಾದಿಸುವುದು

(4) ಕೆಲವರನ್ನು ಕೆರೆಬಾವಿಯಲ್ಲಿ ನೀರು ಕುಡಿಯದಂತೆ ತಡೆಯುವುದು

**95.** **'ಮಂಗಳ ಸಂಗಮ' ಎಂಬುದರ ಅರ್ಥ :**

(1) ತೀರ್ಥಕ್ಷೇತ್ರ

(2) ನದಿ ಪ್ರದೇಶ

(3) ಶುಭ ಸಮಾಗಮ

(4) ಯಾತ್ರಾಸ್ಥಳ

**96.** ‘ಪಿಶಾಚಿ’ ಎಂಬುದು ಯಾವ ಭಾಷೆಯ ಪದ ?

(1) ಅರೇಬಿಕ್

(2) ಪರ್ಷಿಯನ್

(3) ಪ್ರಾಕೃತ

(4) ಸಂಸ್ಕೃತ

**97.** ‘ದರ್ಶನ’ ಸಂಪಾದನೆ ಯಾವಾಗ ಸುಲಭ ಸಾಧ್ಯ :

(1) ಸಂಪ್ರದಾಯಗಳನ್ನು ಅನುಸರಿಸಿದಾಗ

(2) ಮತಿಯ ದೀಪವನ್ನು ಹಿಡಿದು ಹೊರಟಾಗ

(3) ಧರ್ಮಸಹಿಷ್ಣುತೆ ಇಲ್ಲದೇ ಹೋದಾಗ

(4) ಜಾತಿ, ಮತ ಭೇದವಿದ್ದಾಗ

**98.** ‘ಸ್ಮಿತರುಚಿ’ ಎಂದರೆ :

(1) ನಸುನಗು

(2) ಅಟ್ಟಹಾಸ

(3) ಅಪಹಾಸ್ಯ

(4) ಕುಹಕ ನಗೆ

**99.** ‘ನಿರಂಕುಶಮತಿ’ ಎಂದರೆ :

(1) ಸ್ವೇಚ್ಛಾಚಾರ

(2) ಪ್ರಾಚೀನ ನಂಬಿಕೆಗಳನ್ನು ಉಳಿಸಿಕೊಳ್ಳುವುದು

(3) ಸ್ವತಂತ್ರವಿಚಾರಶಕ್ತಿಯನ್ನು ಗಳಿಸುವುದು

(4) ಹತೋಟಿಯಿಲ್ಲದೆ ವಿಚಾರ ಮಾಡುವುದು

ನಿರ್ದೇಶನ : ಈ ಕೆಳಗಿನ ಕವನವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆಸಂಖ್ಯೆ: **100-105**) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :

ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ
ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ
ನಿಮ್ಮ ಶರಣರ ಸೂಳ್ನುಡಿಯ ಒಂದರಘಳಿಗೆಯನಿತ್ತಡೆ
ನಿಮ್ಮನಿತ್ತೆ ಕಾಣಾ ರಾಮನಾಥ
ಹರಿದ ಗೋಣಿಯಲೊಬ್ಬ ಕಳವೆಯ ತುಂಬಿದ
ಇರುಳೆಲ್ಲ ನಡೆದನಾ ಸುಂಕಕಂಜಿ
ಕಳವೆಯೆಲ್ಲಾ ಹೋಗಿ ಬರಿಗೋಣಿ ಉಳಿಯಿತ್ತು
ಅಳಿಮನದವನ ಭಕ್ತಿ ಇಂತಾಯಿತ್ತು ಕಾಣಾ ರಾಮನಾಥ

**100.** ‘ಸೂಳ್ನುಡಿ’ ಎಂಬ ಪದದ ಅರ್ಥ :

(1) ಒತ್ತಾಯಕ್ಕೆ ಮಣಿದು ಆಡುವ ಮಾತು

(2) ಸರದಿಗೆ ಅನುಸಾರ ಆಡುವ ಮಾತು

(3) ಪರಸ್ಪರ ಚರ್ಚಿಸುವುದು

(4) ಮತ್ತೊಬ್ಬರೊಡನೆ ಮಾತನಾಡುವುದು

**101.** ‘ಅಳಿಮನದವನ ಭಕ್ತಿ’ ಎಂದರೆ :

(1) ಚಂಚಲವಾದದು

(2) ಏಕಾಗ್ರತೆಯುಳ್ಳದ್ದು

(3) ಅಸ್ತವ್ಯಸ್ತಗೊಂಡದ್ದು

(4) ನಡತೆಯಿಲ್ಲದ್ದು

**102.** ‘ಕಳವೆ’ ಪದದ ಅರ್ಥ :

(1) ನವಣೆ

(2) ಭತ್ತ

(3) ಗೋಧಿ

(4) ರಾಗಿ

103. 'ಗೋಣಿ' ಎಂದರೆ :
(1) ಚರ್ಮದ ಚೀಲ
(2) ಬಟ್ಟೆಯ ಚೀಲ
(3) ಸೆಣಬಿನ ಚೀಲ
(4) ಕಾಗದದ ಚೀಲ

104. ಧಾನ್ಯವನ್ನು ಹರಿದ ಚೀಲದಲ್ಲಿ ತುಂಬಿಕೊಂಡು ಯಾವುದಕ್ಕೆ ಅಂಜಿ ನಡೆದನು :
(1) ಅರಸರಿಗೆ
(2) ತಳವಾರರಿಗೆ
(3) ಕಳ್ಳರಿಗೆ
(4) ಸುಂಕಕ್ಕೆ

105. 'ಕರಿಯನಿತ್ತಡೆ ಒಲ್ಲೆ, ಸಿರಿಯನಿತ್ತಡೆ ಒಲ್ಲೆ ಹಿರಿದಪ್ಪ ರಾಜ್ಯವನಿತ್ತಡೆ ಒಲ್ಲೆ' – ಎಂಬ ಸಾಲಿನಲ್ಲಿರುವ ಭಾವ :
(1) ಉದಾಸೀನ
(2) ಒಪ್ಪಿಗೆ
(3) ದ್ವಂದ್ವ
(4) ನಿರಾಕರಣೆ

106. 'ಕೌಶಲ್ಯಪೂರ್ಣ ಓದು' ಇದು ಅಲ್ಲ –
(1) ಸಂರಚನಾತ್ಮಕ
(2) ಕಲ್ಪನಾತ್ಮಕ
(3) ಪ್ರಗತಿದಾಯಕ
(4) ಉದ್ದೇಶಪೂರ್ವಕ

107. ಈ ಕೆಳಗಿನವುಗಳಲ್ಲಿ ಯಾವುದು ಸಮಗ್ರ ಓದಿಗೆ (Extensive Reading) ಸಂಬಂಧಿಸಿದ್ದಲ್ಲ ?
(1) ಓದಿನ ಸಂತೋಷವನ್ನು ಹೆಚ್ಚಾಗಿ ಕೊಡುವಂಥದ್ದು
(2) ಒಳತಿಳುವಳಿಕೆಗಾಗಿ ಸೂಕ್ಷ್ಮ ವಿವರಗಳಲ್ಲಿ ಓದನ್ನು ಸಾಧ್ಯ ಮಾಡುವಂಥದ್ದು
(3) ಭಾಷಾ ಕಲಿಕೆಯನ್ನು ಅದು ಹೆಚ್ಚಿಸುವುದು
(4) ಪಠ್ಯದ ಒಟ್ಟಾರೆ ತಿಳುವಳಿಕೆಯನ್ನು ಉಂಟುಮಾಡುವಂಥ ಓದು

108. ಬರವಣಿಗೆಯ 'ಪ್ರಕ್ರಿಯಾತ್ಮಕ ವಿಧಾನ'ದ ದೃಷ್ಟಿಯು –
(1) ಪ್ರಕ್ರಿಯೆಯ ಮೇಲೆ ಮಾತ್ರ ಕೇಂದ್ರಿತ
(2) ಅಂತ್ಯ ಫಲಿತದ ಮೇಲೆ ಮಾತ್ರ ಕೇಂದ್ರಿತ
(3) ಪ್ರಕ್ರಿಯೆ ಹಾಗೂ ಅಂತಿಮ ಫಲಿತದ ಮೇಲೆ ಕೇಂದ್ರಿತ
(4) ಒಳ್ಳೆಯ ಬರವಣಿಗೆಯ ಉಪಯೋಗದ ಮೇಲೆ ಕೇಂದ್ರಿತ

109. ಭಾಷೆಯ ಪಠ್ಯಕ್ರಮದಲ್ಲಿ 'ಸಾಹಿತ್ಯ'ವನ್ನು ಅಳವಡಿಸುವಲ್ಲಿ , ಈ ಕೆಳಗಿನವುಗಳಲ್ಲಿ ಯಾವುದು ಅತ್ಯಂತ ಕಡಿಮೆ ಮಹತ್ವದ ಕಾರಣವಾಗಿದೆ ?
(1) ಅದು ಕೇವಲ ಕೇಳುವ ಹಾಗೂ ಮಾತನಾಡುವ ಕೌಶಲ್ಯವನ್ನು ಪೋಷಿಸುತ್ತದೆ
(2) ಅದು ಒಂದು ಅಥೆಂಟಿಕ್ ಸಾಮಗ್ರಿಯಾಗಿದೆ
(3) ವಿದ್ಯಾರ್ಥಿಗಳಿಗೆ ಇನ್ನೊಂದು ಸಂಸ್ಕೃತಿಯಲ್ಲಿ ತಿಳಿಯಲು ಅದು ಅವಕಾಶ ಮಾಡಿ ಕೊಡುತ್ತದೆ
(4) ವಿದ್ಯಾರ್ಥಿಗಳಿಗೆ ಅವರ ವೈಯಕ್ತಿಕವಾದ ಅಭಿಪ್ರಾಯ ಕೊಡುವಲ್ಲಿ ಉತ್ತೇಜಕ ಪಾತ್ರ ವಹಿಸುತ್ತದೆ

110. ಈ ಕೆಳಗಿನವುಗಳಲ್ಲಿ ಯಾವುದು ಸರಿಯಾದ ಹೇಳಿಕೆ ?
(1) ವಿರಾಮ ಚಿಹ್ನೆಗಳು ವಾಕ್ಯದ ಅರ್ಥವನ್ನು ಬದಲಾಯಿಸುತ್ತವೆ.
(2) ವಿರಾಮ ಚಿಹ್ನೆಗಳು ವಾಕ್ಯದಲ್ಲಿ ಯಾವುದೇ ಬದಲಾವಣೆಯನ್ನು ಮಾಡಲಾರವು.
(3) ವಿರಾಮ ಚಿಹ್ನೆಗಳು ಪಠ್ಯವನ್ನು ಸುಂದರಗೊಳಿಸಲು ಸಹಾಯ ಮಾಡುತ್ತವೆ.
(4) ವಿರಾಮ ಚಿಹ್ನೆಗಳು ಪಠ್ಯದ ಓದಿನ ಓಟವನ್ನು ತಡೆಯುತ್ತವೆ.

**111.** **ವಿದ್ಯಾರ್ಥಿಯ ಬರವಣಿಗೆಯ ಮೌಲ್ಯಾಂಕನವು ಇದರ ಮೇಲೆ ಪ್ರಮುಖವಾಗಿ ಕೇಂದ್ರೀಕರಿಸಬೇಕು**

(1) ಸರಿಯಾದ ಕಾಗುಣಿತ ಮತ್ತು ವ್ಯಾಕರಣ

(2) ವಿಚಾರಗಳ ಅಭಿವ್ಯಕ್ತಿ

(3) ಪದಗಳ ಮಿತಿಯನ್ನು ಉಳಿಸಿಕೊಳ್ಳುವುದು

(4) ಬರೆಯುವಾಗ ನುಡಿಗಟ್ಟು ಮತ್ತು ಗಾದೆ ಮಾತುಗಳನ್ನು ಬಳಸುವುದು

**112.** **NCF 2005 ನ ಮಾರ್ಗದರ್ಶಿ ಸೂತ್ರಗಳಲ್ಲಿ ಈ ಕೆಳಗಿನವುಗಳಲ್ಲಿ ಯಾವುದು ಒಳಗೊಂಡಿಲ್ಲ ?**

(1) ಶಾಲೆಯ ಹೊರಗಡೆ ಜೀವನದ ಜೊತೆಗೆ ಜ್ಞಾನವನ್ನು ಜೋಡಿಸುವುದು

(2) ಕಲಿಯುವಿಕೆಯನ್ನು ಊರು ಹೊಡೆಯುವ ಪದ್ಧತಿಯಿಂದ ತಪ್ಪಿಸುವುದು

(3) ಪಠ್ಯಕ್ರಮವು ಪಠ್ಯಕೇಂದ್ರಿತವಾದದ್ದು ಆಗಿರಬೇಕು

(4) ಪರೀಕ್ಷೆಯನ್ನು ಹೆಚ್ಚು ಅಳ್ಳಕಗೊಳಿಸಿ (Flexible), ಕ್ಲಾಸ್ ರೂಮಿನ ಜೀವನಕ್ಕೆ ಅದನ್ನು ಸಮಗ್ರೀಕರಣಗೊಳ್ಳಿಸುವಂತೆ ಮಾಡುವುದು

**113.** **ಘಟನೆಯ ಮಾಹಿತಿ ಬಗ್ಗೆ – ಏನಾಯಿತು, ಯಾವಾಗ ಆಯಿತು, ಎಲ್ಲಿ ಆಯಿತು, ಘಟನೆ ನಡೆಯಲು ಕಾರಣ, ಮತ್ತು ಘಟನೆ ಅಂತ್ಯಗೊಂಡ ಬಗೆ – ಈ ಎಲ್ಲವನ್ನೂ ಶಬ್ದಗಳಲ್ಲಿ ಒಳಗೊಳ್ಳುವ ಚಿತ್ರವನ್ನು ಹೀಗೆ ಕರೆಯುತ್ತೇವೆ :**

(1) ಪ್ರಾಜೆಕ್ಟ್ ವರ್ಕ್

(2) ಗೃಹ ಲೇಖನ

(3) ಉಪಾಖ್ಯಾನದ ಮಾಹಿತಿ (Anecdotal record)

(4) ಮಾಪನ ಪಟ್ಟಿ

**114.** **ಭಾಷೆಯಲ್ಲಿ ವಿದ್ಯಾರ್ಥಿಗಳು ಏನು ಮಾಡುತ್ತಿದ್ದಾರೆ ಎಂದು ತೋರಿಸಲು ಈ ಕೆಳಗಿನವುಗಳಲ್ಲಿ ಯಾವುದು ಅತ್ಯಂತ ಶ್ರೇಷ್ಠ ಪುರಾವೆಯಾಗಿದೆ ?**

(1) ಟೆಸ್ಟ್ ನಲ್ಲಿ ಪಡೆದ ಅಂಕಗಳು

(2) ಬರೆಯುವಲ್ಲಿ ಮತ್ತು ಮಾತನಾಡುವಲ್ಲಿ ವಿದ್ಯಾರ್ಥಿಗಳು ಬಳಸಿದ ಭಾಷೆ

(3) ರಾಷ್ಟ್ರೀಯ ಪಠ್ಯಕ್ರಮ ಮತ್ತು ಪಠ್ಯವಿವರಗಳ ಕುರಿತು ಅರಿವು

(4) ಭಾಷಾ ಗುರಿಗಳು ಹಾಗೂ ಉದ್ದೇಶಗಳ ಅರಿವು

**115.** **ವೈಗೊಸ್ಕಿಯ (Vygotsky) "scaffolding hypothesis" ಪ್ರಕಾರ ಅಧ್ಯಾಪಕನು ಭಾಷೆಯನ್ನು ಕಲಿಯುವವರಿಗೆ ಜೋಡಿ ಮತ್ತು ಗುಂಪುಗಳಲ್ಲಿ ಕೆಲಸ ಮಾಡುವ ಅವಕಾಶವನ್ನು ಕೊಡಬೇಕು ಎನ್ನುವುದು :**

(1) ಅಧ್ಯಾಪಕನಿಗೆ ಕೆಲಸವನ್ನು ನಿಭಾಯಿಸುವುದನ್ನು ಸುಲಭ ಮಾಡುತ್ತದೆ

(2) ವಿದ್ಯಾರ್ಥಿಗಳು ತಮ್ಮಲ್ಲಿಯೇ ಮಾಡುವ ಸಂವಹನ ದಿಂದ ಅಧ್ಯಾಪಕನಿಗೆ ವಿಶ್ರಾಂತಿ ಸಿಗುತ್ತದೆ

(3) 'ಸಾಮಾಜಿಕ ಸಂವಹನ'ವು ಕಲಿಯುವುದನ್ನು ಸಾಧ್ಯವಾಗಿಸುವಲ್ಲಿ ಅಗಾಧವಾದ ಸಾಧನವಾಗುತ್ತದೆ

(4) ಇಂಥ ಸಾಮಾಜಿಕ ಒಡನಾಟಗಳು ಕಲಿಯುವವರನ್ನು ಭಾಷಾ ಕಲಿಕೆಯಿಂದ ದಾರಿ ತಪ್ಪಿಸುತ್ತವೆ

**116.** ಪ್ರಾರಂಭದ ಧ್ವನಿಗಳು ಮತ್ತು ಅದರ ಸಮ್ಮಿಶ್ರಣದ ಬದಲಿಗೆ, ಭಾಷೆಯನ್ನು ಸರಳ ವಾಕ್ಯಗಳ ಮೂಲಕ ಪ್ರಾರಂಭಿಸಿ ಕಲಿಸಲಾಗುತ್ತದೆ. ಈ ಮಾತು ಏನನ್ನು ಒಳಗೊಂಡಿದೆ ಅಂದರೆ –

(1) ಸಂವಹನವು ಸಂಪೂರ್ಣ ವಾಕ್ಯಗಳ ಮೇಲೆ ಆಧಾರಿತವಾಗಿದೆ

(2) ಭಾಷೆಯನ್ನು ಅಂತಸ್ಥಗೊಳಿಸುವಲ್ಲಿ ಉಚ್ಚಾರಕ್ಕೆ ಯಾವುದೇ ಸ್ಥಾನವಿಲ್ಲ

(3) ವ್ಯಾಕರಣ ಹಾಗೂ ಉಚ್ಚಾರಕ್ಕೆ ಭಾಷಾ ಕಲಿಕೆಯಲ್ಲಿ ಸಮಾನ ಸ್ಥಾನವಿದೆ

(4) ವ್ಯಾಕರಣವು ಸಂವಹನದ ಪ್ರಮುಖ ತಳಹದಿಯಾಗಿದೆ

**117.** ಏಳನೇ ತರಗತಿಯ ಶಿಕ್ಷಕನು ನೋಟದ ಮೂಲಕ ಕಲಿಯುವವರಿಗೆ ಯುಟ್ಯೂಬ್‌ನ್ನು ಬಳಸಿ ವಿಡಿಯೋ ಉಪಯೋಗಿಸುತ್ತಾನೆ, ಕೇಳುವ ಮೂಲಕ ಕಲಿಯುವವರಿಗೆ ಆಡಿಯೋ ರಿಕಾರ್ಡ್‌ನ್ನು ಉಪಯೋಗಿಸುತ್ತಾನೆ, ಮತ್ತು ದೈಹಿಕ ಚಲನೆಯ ಮೂಲಕ ಕಲಿಯುವವರಿಗೆ (kinesthetic) ಪರಸ್ಪರ ತೊಡಗಿಕೊಳ್ಳುವ ಆಟದ ಬಗೆಯನ್ನು ಭಾಷಾ ತರಗತಿಯಲ್ಲಿ ಬಳಸಿಕೊಳ್ಳುತ್ತಾನೆ. ಶಿಕ್ಷಕನು ಬಳಸುವ ಈ ಎಲ್ಲ ಬಹುಮಾಧ್ಯಮಗಳ ಬಳಕೆಯು ವೈಯಕ್ತಿಕವಾದ ಈ ಅವಶ್ಯಕತೆಯನ್ನು ಪೂರೈಸುತ್ತದೆ :

(1) ಭಾಷಾ ಭೇದ

(2) ಕಲಿಯುವ ಶೈಲಿಗಳು

(3) ಕಲಿಯುವ ಅಸಾಮರ್ಥ್ಯಗಳು

(4) ಅಥೆಂಟಿಕ್ ಸಾಮಗ್ರಿಗಳು

**118.** ಜ್ಞಾನ ವಿಷಯಕ ಪಂಡಿತರ (cognitivists) ದೃಷ್ಟಿಕೋನದಲ್ಲಿ, ಶಿಕ್ಷಕನು ವಿದ್ಯಾರ್ಥಿಗಳ ತಪ್ಪುಗಳನ್ನು ಹೀಗೆ ಪರಿಗಣಿಸಬೇಕು :

(1) ಕಲಿಯುವಲ್ಲಿ ಅದು ಹಿನ್ನಡೆ ಮತ್ತು ಅಡ್ಡಿ.

(2) ಕಲಿಯುವ ಒಂದು ಭಾಗ ಮತ್ತು ಆಲೋಚನೆಗೆ ಅದು ಒಳನೋಟ ಒದಗಿಸುವಂಥದ್ದು.

(3) ತಪ್ಪನ್ನು ಆ ಕ್ಷಣದಲ್ಲೇ ತಿದ್ದಿ ಪುನರಾವರ್ತನೆ ಆಗದಂತೆ ಪರಿಗಣಿಸಬೇಕಾದದ್ದು.

(4) ಕಲಿಯುವಲ್ಲಿ ವಿದ್ಯಾರ್ಥಿಗಳು ತೋರಿಸುವ ನಿರ್ಲಕ್ಷ್ಯತೆ ಮತ್ತು ಅದನ್ನು ಕೂಡಲೇ ಗಮನ ಹರಿಸಿ ಪರಿಹರಿಸಬೇಕಾದದ್ದು.

**119.** 'ಸೂಕ್ಷ್ಮಗ್ರಹಿಕೆ'ಯು (Intensive listening) ಕೇಳುವುದನ್ನು ಹೀಗೆ ಸೂಚಿಸುತ್ತದೆ :

(1) ಏಕಾಗ್ರತೆ

(2) ಸಹನೆ

(3) ಶಿಸ್ತು

(4) ಸುಧಾರಣೆ

**120.** ನಿಶ್ಯಬ್ದವಾದ ಓದಿನಿಂದ ಕಲಿಯುವವರು ಈ ಕೆಳಗಿನದನ್ನು ಅತ್ಯಂತ ಕಡಿಮೆಯಾಗಿ ಸಾಧಿಸುತ್ತಾರೆ :

(1) ಶಬ್ದಕೋಶ

(2) ವ್ಯಾಕರಣ

(3) ಮಾತನಾಡುವ ಕೌಶಲ್ಯ

(4) ಓದುವ ಕೌಶಲ್ಯ

ಅಭ್ಯರ್ಥಿಗಳು ಕನ್ನಡವನ್ನು ಭಾಷೆ-**II** ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-**V** ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆಸಂಖ್ಯೆ **121 - 150**) ಉತ್ತರಿಸಬೇಕು.

Candidates should attempt the questions from **Part-V (Q.No. 121-150)**, if they have opted **KANNADA** as **Language-II** only.

## ಭಾಗ – V

## ಭಾಷೆ – II

## ಕನ್ನಡ

**ಅಭ್ಯರ್ಥಿಗಳು ಕನ್ನಡವನ್ನು ಭಾಷೆ-II ಎಂದು ಆರಿಸಿಕೊಂಡಿದ್ದರೆ ಮಾತ್ರ ಭಾಗ-V ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆಸಂಖ್ಯೆ 121 - 150) ಉತ್ತರಿಸಬೇಕು.**

**ನಿರ್ದೇಶನ : ಈ ಕೆಳಗಿನ ಲೇಖನದ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆಸಂಖ್ಯೆ 121 - 128) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :**

ಗುಬ್ಬಚ್ಚಿ ಬಳಗಕ್ಕೆ ಸೇರಿದ ಪ್ರಸಿದ್ಧ ಹಕ್ಕಿ ಗೀಜುಗ. ಇದು ಹುಲ್ಲಿನ ನಾರಿನಿಂದ ಕುಲಾವಿಯಾಕಾರದ ಗೂಡುಗಳನ್ನು ನೇಯುವುದರಿಂದ ಈ ಕುಶಲ ಕಲೆಗಾಗಿ ಇದು ಎಲ್ಲರಿಗೂ ಗೊತ್ತಿರುತ್ತದೆಂದು ಹೇಳಬಹುದು. ಕೊಕ್ಕು ಮತ್ತು ಆಕಾರಗಳಲ್ಲಿ ಇದು ಗುಬ್ಬಚ್ಚಿಯನ್ನೇ ಹೋಲುವುದಾದರೂ ಮೈ ಪ್ರಧಾನವಾಗಿ ಹಳದಿ ಬಣ್ಣವೂ, ಕಪ್ಪು ಬಣ್ಣದ ಕಪಾಲವೂ ಇರುವುದರಿಂದ ಇದನ್ನು ಸುಲಭವಾಗಿ ಗುರುತಿಸಬಹುದು.

ಚಿಕ್ಕಂದಿನಿಂದಲೂ ಗೀಜುಗನ ಗೂಡು ನನ್ನ ಗಮನ ಸೆಳೆದಿದೆ. ನಮ್ಮ ಮನೆಯೆದುರು ಇದ್ದ ಹೊಲಗಳಲ್ಲಿ ಎತ್ತರದ ಈಚಲು ಮರದ ಗರಿಗಳ ತುತ್ತತುದಿಯಲ್ಲಿ ಇವು ಗೂಡು ಕಟ್ಟುತ್ತಿದ್ದವು. ತೂಗುವ ತೊಟ್ಟಿಲಿನಂತೆ ಗಾಳಿಗೆ ತೂಗಾಡುತ್ತಿರುವ ಈ ಗೂಡುಗಳನ್ನು ಎಷ್ಟು ಭದ್ರವಾಗಿ ಕೊಂಬೆಗೆ ಕಟ್ಟಿರುತ್ತದೆಂದರೆ ಒಂದು ದಿನವೂ ಅವು ಕಳಚಿ ಬಿದ್ದುದ್ದನ್ನು ನೋಡಿಲ್ಲ. ಗೂಡು ಕಟ್ಟುವ ಸ್ಥಳ ಆಯ್ಕೆ ಮಾಡುವಾಗ ಗೀಜುಗನಹಕ್ಕಿ ಅಸಾಧಾರಣ ಬುದ್ಧಿವಂತಿಕೆ ತೋರಿಸುತ್ತದೆ. ಗೂಡು ಕಟ್ಟಲು ಪ್ರಶಸ್ತವಾದ ಎತ್ತರದ ಮರ ಸಿಕ್ಕದಿದ್ದಾಗ ಇವು ಗಿಡಗಳ ಕೊಂಬೆಗಳಲ್ಲಿ ಗೂಡು ಕಟ್ಟಿದ್ದು ನೋಡಿದ್ದೇನೆ. ಆದರೆ ಹಾಗೆ ನೆಲಮಟ್ಟದಲ್ಲಿ ಗೂಡು ಕಟ್ಟುವಾಗೆಲ್ಲ ಗೀಜುಗ ಕೆಳಗಡೆ ಆಳವಾದ ಬಾವಿಯೋ, ನದಿ ಕೆರೆಗಳ ಕಮರಿಯೋ ಇರುವೆಡೆ ಕಮರಿಗಳ ಕಡೆ ಬಾಗಿರುವ ಕೊಂಬೆಯ ತುಟ್ಟತುದಿಗೆ ಗೂಡು ಕಟ್ಟುತ್ತದೆ. ಕೆಳಗಡೆ ಆಳವಾದ ಪ್ರಪಾತ ಇರುವುದರಿಂದ ಸ್ವಲ್ಪ ಆಯ ತಪ್ಪಿದರೂ ಕೊಂಬೆ ಸಮೇತ ಪಾತಾಳಕ್ಕೆ ಬೀಳುವ ಭಯದಲ್ಲಿ ಅದು ಗೂಡು ಕಟ್ಟಿರುವ ಬಳುಕುವ ಕೊಂಬೆಯ ಮೇಲೆ ಹೋಗಿ ಮೊಟ್ಟೆಗಳನ್ನಾಗಲೀ ಮರಿಗಳನ್ನಾಗಲೀ ಕದಿಯಲು ಬೆಕ್ಕು ಹಾವು ಮೊದಲಾದ ಯಾವ ಪ್ರಾಣಿಯೂ ಧೈರ್ಯ ಮಾಡುವುದಿಲ್ಲ.

ಆದರೆ ಗೀಜುಗನ ಗೂಡುಗಳಿಂದ ತೊಂದರೆಗೊಳಗಾಗಿರುವವರೆಂದರೆ ಟೆಲಿಫೋನ್ ಮತ್ತು ವಿದ್ಯುಚ್ಛಕ್ತಿ ಇಲಾಖೆಯವರು. ಕಬ್ಬಿನ ಗದ್ದೆಗಳ ಬಳಿ ಎಳೆದಿರುವ ತಂತಿಗಳ ಮೇಲೆ ಸಾಲು ಸಾಲಾಗಿ ಜೋತಾಡುತ್ತಿರುವ ಸಾವಿರಾರು ಗೀಜುಗನ ಗೂಡನ್ನು ನೋಡಬಹುದು. ವಿದ್ಯುತ್ತಂತಿಗಳಿಗೆ ಕಟ್ಟಿದ ಗೂಡೇನೂ ಬೀಳುವುದಿಲ್ಲ. ಆದರೆ ಕೊಂಬೆಯ ಮೇಲೆ ಗೂಡು ಕಟ್ಟಿದಾಗ ಅತ್ತಿತ್ತ ಜಾರದ ಹಾಗೆ ಬಿಗಿಯುವಂತೆ ತಂತಿ ಮೇಲೆ ಕಟ್ಟಿದಾಗ ಸಾಧ್ಯವಾಗುವುದಿಲ್ಲ. ವಿದ್ಯುತ್ತಂತಿಗೆ ಕೊಂಬೆಗಳಂತೆ ಅಡ್ಡ ಕವಲುಗಳಿರುವುದಿಲ್ಲ. ಕೆಳಗೆ ಬೀಳದಂತೆ ಭದ್ರವಾಗಿ ಬಿಗಿದರೂ ಅಡ್ಡಡ್ಡಲಾಗಿ ಅವನ್ನು ಸುಲಭವಾಗಿ ಜರುಗಿಸಬಹುದು. ಜೋರಾಗಿ ಗಾಳಿ ಬೀಸಿದಾಗ ಅಷ್ಟು ಗೂಡುಗಳೂ ಜಾರಿ ಜರುಗುತ್ತಾ ಕಂಬದ ಇನ್ಸುಲೇಟರ್ ಬಳಿ ಎಲ್ಲ ಪಿಂಡಿ ಕಟ್ಟಿದಂತೆ ಸಿಕ್ಕಿಕೊಂಡು ಮಳೆ ಬಂದ ಕೂಡಲೇ ತೋಯ್ದು ಗೂಡುಗಳಿಂದ ಷಾರ್ಟ್ ಸರ್ಕ್ಯೂಟ್ ಪ್ರಾರಂಭವಾಗುತ್ತದೆ. ಗೀಜುಗನ ಹಕ್ಕಿಗಳಿಂದ, ಗೂಡುಗಳಿಂದ ರೈತರಿಗೆ ಹೆಚ್ಚಿನ ತೊಂದರೆ ಇಲ್ಲದಿದ್ದರೂ ಸರ್ಕಾರಿ ಇಲಾಖೆಗಳಿಗೆ ತೊಂದರೆಯಾಗುತ್ತಿರುವುದರ ಅಪರೂಪದ ಉದಾಹರಣೆ ಇದು.

ನಾನೊಮ್ಮೆ ಗೆಳೆಯ ಶಾಮಣ್ಣನವರ ಜೊತೆ ಒಂದು ಹಳ್ಳಿಗೆ ಹೋಗಿದ್ದಾಗ ಅಲ್ಲೊಬ್ಬ ಹಳ್ಳಿ ಕ್ಷೌರಿಕನ ಹತ್ತಿರ ಕ್ಷೌರ ಮಾಡಿಸಿಕೊಳ್ಳಲು ಹೋದೆ. ಆತ ಮೂರು ನಾಲ್ಕು ಬಿದಿರು ಗಳುಗಳನ್ನು ಇಟ್ಟು ಮೇಲೆ ಕಬ್ಬಿನ ಗರಿಗಳನ್ನು ಹೊದ್ದಿಸಿ

ಜೋಪಡಿ ನಿರ್ಮಿಸಿ ಕ್ಷೌರದ ಷಾಪ್ ಮಾಡಿಕೊಂಡಿದ್ದ. ಆತ ಹೇರ್ ಕಟ್ ನಡೆಸುತ್ತಿದ್ದಾಗ ನನ್ನೆದುರು ಇದ್ದ ಜೋಪಡಿ ಕಿಂಡಿಯಲ್ಲಿ ಆತನ ಷಾಪಿನ ಹಿಂಭಾಗದಲ್ಲಿ ಹಲವಾರು ಗೀಜುಗನಹಕ್ಕಿ ಗೂಡುಗಳು ಕೊಂಬೆಗಳಿಗೆ ನೇತಾಡುತ್ತಿದ್ದುದ್ದು ಕಾಣುತ್ತಿತ್ತು. ಮನುಷ್ಯರನ್ನು ಅಲ್ಲಿ ಹತ್ತಿರದಿಂದ ನೋಡಿ ನೋಡಿ ತುಂಬ ಬಳಕೆಯಾಗಿದ್ದರಿಂದಲೋ ಏನೋ ಗಿಜುಗನ ಹಕ್ಕಿಗಳು ಹೆದರದೆ ಹತ್ತಿರದಲ್ಲೇ ಕುಳಿತುಕೊಳ್ಳುತ್ತಿದ್ದವು. ಗಿರಾಕಿಗಳು ಯಾರೂ ಇಲ್ಲದೆ ಖಾಲಿ ಬಿದ್ದಿದ್ದರಿಂದ ಇನ್ನೊಬ್ಬ ಗಿರಾಕಿ ಬರುವವರೆಗೂ ಆ ಕುರ್ಚಿಯ ಮೇಲೆ ನಾನು ಕುಳಿತು ಗೀಜುಗನ ಹಕ್ಕಿಗಳ ಫೋಟೋ ತೆಗೆಯಲು ಆ ಕ್ಷೌರಿಕ ಸಮ್ಮತಿಸಿದ. ಅವತ್ತು ಇಡೀ ದಿನವೆಲ್ಲಾ ನಾನು ಅಲ್ಲಿ ಕುಳಿತು ಗೀಜುಗನ ಹಕ್ಕಿಗಳ ಫೋಟೋ ತೆಗೆದೆ.

ಗಂಡು ಹಕ್ಕಿಗಳು ತಮ್ಮ ಗೂಡನ್ನು ಯಾವಾದರೂ ಹೆಣ್ಣು ಹಕ್ಕಿ ಸ್ವೀಕರಿಸಿದರೆ ಅದೇನೂ ಅದರೊಟ್ಟಿಗೆ ದಾಂಪತ್ಯ ನಡೆಸುತ್ತಾ ಇದ್ದುಬಿಡುವುದಿಲ್ಲ. ಹೆಣ್ಣು ಹಕ್ಕಿ ಮೊಟ್ಟೆ ಇಟ್ಟು ಅದರೊಳಗೆ ಕಾವು ಕೊಡಲು ಕೂರುತ್ತಿದ್ದಂತೆಯೇ ಆ ಗೂಡನ್ನು ಅದರ ಜವಾಬ್ದಾರಿಗೇ ವಹಿಸಿ ತಾನು ಬೇರೊಂದು ಗೂಡು ಹೆಣೆಯಲು ಪ್ರಾರಂಭಿಸುತ್ತದೆ.

ಆಫ್ರಿಕಾದ ಕೆಲವು ಗೀಜುಗನ ಹಕ್ಕಿಗಳು ಜೇನುಗಳಂತೆ ಸಾಮೂಹಿಕ ಗೂಡುಗಳನ್ನು ರಚಿಸಿಕೊಳ್ಳುತ್ತವೆ. ಇವು ಆ ಗೂಡುಗಳಲ್ಲಿ ಮೊಟ್ಟೆ ಮರಿಗಳನ್ನು ಮಾಡುವುದಲ್ಲದೆ ರಾತ್ರಿ ಹೊತ್ತು ಕೂರಲೂ ಸಹ ಆ ಗೂಡುಗಳನ್ನು ಉಪಯೋಗಿಸುತ್ತವೆ.

**121.** ಪಕ್ಷಿ ಸಂಕುಲದಲ್ಲಿ ಗೀಜುಗ ಹೆಚ್ಚು ಕುತೂಹಲ ಮೂಡಿಸಲು ಕಾರಣ :

(1) ಚಮತ್ಕಾರ

(2) ಶ್ರಮ

(3) ಬುದ್ಧಿವಂತಿಕೆ

(4) ಕಲೆಗಾರಿಕೆ

**122.** ಗೀಜುಗವನ್ನು ಯಾವ ಮೈಬಣ್ಣದ ಮೂಲಕ ಸುಲಭವಾಗಿ ಗುರುತಿಸಬಹುದು :

(1) ಕಪ್ಪು

(2) ಹಳದಿ

(3) ಬೂದು

(4) ಹಸಿರು

**123.** ಸಾಮೂಹಿಕವಾಗಿ ಗೂಡುಕಟ್ಟುವ ಗೀಜುಗಗಳು ಯಾವ ದೇಶದಲ್ಲಿವೆ ?

(1) ಫಿನ್‌ಲೆಂಡ್

(2) ಅಮೇರಿಕಾ

(3) ಆಫ್ರಿಕಾ

(4) ನೆದರ್‌ಲ್ಯಾಂಡ್

**124.** ಗಂಡು ಗೀಜುಗ ಯಾವಾಗ ಬೇರೊಂದು ಗೂಡು ಹೆಣೆಯಲು ಪ್ರಾರಂಭಿಸುತ್ತದೆ :

(1) ಹೆಣ್ಣುಹಕ್ಕಿ ಗೂಡುಬಿಟ್ಟು ಹೊರಟಾಗ

(2) ಹೆಣ್ಣುಹಕ್ಕಿ ಮೊಟ್ಟೆ ಇಟ್ಟು ಕಾವು ಕೊಡಲು ಕುಳಿತಾಗ

(3) ಬೆಕ್ಕು, ಹಾವು ಮೊದಲಾದ ಪ್ರಾಣಿಗಳು ಬಂದಾಗ

(4) ಕೊಂಬೆಗಳು ಬಳುಕುತ್ತಿರುವಾಗ

**125.** 'ಕುತ್ತುರೆ' ಎಂಬುದರ ಅರ್ಥ :

(1) ಸಾಲು

(2) ಗೊಂಚಲು

(3) ಬೇಲಿ

(4) ಪೊದರು

**126.** 'ಪ್ರಶಸ್ತ'ವಾದದ್ದು ಎಂದರೆ :

(1) ಸರಳವಾದದ್ದು

(2) ಉತ್ತಮವಾದದ್ದು

(3) ಸತ್ವಯುತವಾದದ್ದು

(4) ಕಳಪೆಯಾದದ್ದು

**127.** 'ಗಿರಾಕಿ' ಎಂಬುದು ಯಾವ ಭಾಷೆಯ ಶಬ್ದ :

(1) ಅರೇಬಿಕ್

(2) ಉರ್ದು

(3) ಮರಾಠಿ

(4) ಪರ್ಷಿಯನ್

**128.** ಈ ಲೇಖನದ ಮುಖ್ಯ ಆಶಯ :

(1) ಪ್ರತಿಯೊಂದು ಜೀವಿಯೂ ಸ್ವಂತ ನೆಲೆಯನ್ನು ಸಾಮರ್ಥ್ಯಕ್ಕೆ ಅನುಗುಣವಾಗಿ ರೂಪಿಸಿಕೊಳ್ಳುತ್ತವೆ.

(2) ಸಂಬಂಧಗಳು ಕೇವಲ ಮನುಷ್ಯನಿಗೆ ಮಾತ್ರ

(3) ಸಂತಾನೋತ್ಪತ್ತಿ ಅನಿವಾರ್ಯ

(4) ನಿಸರ್ಗದ ಉತ್ಪನ್ನಗಳು ಎಲ್ಲರಿಗೂ ಅಗತ್ಯ

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆಸಂಖ್ಯೆ : 129 - 135) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ :**

ಮನುಷ್ಯರನ್ನು ಕಡೆಗಣಿಸಿ ಯಂತ್ರಗಳಿಗೆ ಪ್ರಾಮುಖ್ಯತೆ ನೀಡಿದ್ದು ಆಧುನಿಕ ಯುಗದ ಮೊದಲ ದುರಂತವಾಗಿದೆ. ತಂತ್ರಜ್ಞಾನದ ಬಲದಿಂದ ಪ್ರಕೃತಿಯನ್ನೇ ಗೆಲ್ಲುತ್ತೇನೆ ಎಂದು ಹೊರಟಿದ್ದು ಈ ಯುಗದ ಅಹಂಕಾರವಾಗಿದೆ. ಇವೆರಡು ಕಾರಣಕ್ಕಾಗಿ ಮಾನವ ಕುಲವಿಂದು ಅಪಾರ ಬೆಲೆ ತೆರುತ್ತಿದೆ. ಮನುಷ್ಯರ ಕಾಯಕ ಹಾಗೂ ನೈಸರ್ಗಿಕ ಸಂಪನ್ಮೂಲಗಳು ಇಷ್ಟೊಂದು ಹೀನಾಯ ಸ್ಥಿತಿಯನ್ನು ತಲುಪಿದ್ದು ಪ್ರಾಯಶಃ ಮಾನವ ಇತಿಹಾಸದಲ್ಲಿಯೇ ಮೊದಲು ಎನ್ನಬಹುದು.

ನೈತಿಕತೆ ಅನೈತಿಕತೆಗಳ ನಡುವಿನ ಅಂತರವನ್ನೇ ಅಳಿಸಿ ಹಾಕಿದ ಈ ಯುಗವು ನೈತಿಕತೆಯ ಜಾಗದಲ್ಲಿ ವೃತ್ತಿಪರತೆ ಎಂಬ ಹೊಸ ಮೌಲ್ಯವನ್ನು ಸ್ಥಾಪಿಸಿತು. ವೃತ್ತಿಪರತೆ ನೈತಿಕವೂ ಅಲ್ಲ ಅನೈತಿಕವೂ ಅಲ್ಲ ಎಂದು ಸಾರಿತು. ಉದಾಹರಣೆಗೆ ಬಾಂಬ್ ತಯಾರಿಸಬೇಕಾದ ವಿಜ್ಞಾನಿ ಉತ್ತಮ ಬಾಂಬನ್ನು ತಯಾರಿಸುವುದು ವೃತ್ತಿಧರ್ಮ; ಬಾಂಬಿನ ದುಷ್ಪರಿಣಾಮಗಳ ಬಗ್ಗೆ ಚಿಂತಿಸುತ್ತ ಕೂರುವುದು ವೃತ್ತಿಪರತೆಯಲ್ಲ, ವ್ಯರ್ಥ ಕಾಲಹರಣ ಎಂದು ಸಾರಿತು. ದೇಸಿ ಚಳುವಳಿಯನ್ನು ಈ ಎಲ್ಲ ಗೊಂದಲಗಳ ನಡುವಿನಿಂದ ಹೊರತರಬೇಕಾಗಿದೆ.

ಅನೇಕರು ಭಾರತೀಯ ಪರಂಪರೆಯನ್ನು ಏಕಸೆಲೆಯ ಪ್ರವಾಹವಾಗಿ ಕಾಣುತ್ತಾರೆ. ಆದರೆ ತಮ್ಮ ಪರಂಪರೆಯಲ್ಲಿ ಹಲವು ಸೆಲೆಗಳಿವೆ. ಹಲವು ಚಳುವಳಿಗಳು ಘಟಿಸಿವೆ, ಹಲವು ಜೀವನ ಪದ್ಧತಿಗಳು ಒಟ್ಟಿಗೆ ಬದುಕಿವೆ. ಮಧ್ಯಕಾಲೀನ ಭಕ್ತಿ ಚಳುವಳಿಯನ್ನೇ ಗಮನಿಸಿದರೆ, ಅದು ಕಾಯಕ ಕೇಂದ್ರಿತವಾಗಿತ್ತು ಹಾಗೂ ವೈದಿಕ ಪರಂಪರೆಯನ್ನು ಧಿಕ್ಕರಿಸಿತ್ತು. ಭಕ್ತಿ ಚಳುವಳಿಯ ಹೆಚ್ಚಿನ ಸಂತರು ಕೆಳಜಾತಿಗಳಿಂದ ಬಂದ ಕಾಯಕ ಜೀವಿಗಳಾಗಿದ್ದರು.

ಒಂದು ಅರ್ಥದಲ್ಲಿ ಭಕ್ತಿ ಚಳುವಳಿಯ ಉದ್ದೇಶವೇನಿತ್ತೋ ಅದೇ ಉದ್ದೇಶ ಇಂದಿನ ದೇಸಿ ಚಳುವಳಿಯದ್ದೂ ಹೌದು. ವ್ಯತ್ಯಾಸವಿಷ್ಟೇ; ಅಂದು ಯಂತ್ರಗಳಿರಲಿಲ್ಲ, ಇಂದು ಇವೆ. ಅಂದಿನ ದಬ್ಬಾಳಿಕೆ ಮೇಲ್ಜಾತಿ ಹಾಗೂ ಮೇಲ್ವರ್ಗಗಳ ಧಾರ್ಮಿಕ ಹಾಗೂ ಸಾಮಾಜಿಕ ಹಿಡಿತದ ಮೂಲಕ ಸಾಧ್ಯವಾಗಿತ್ತು. ಇಂದಿನ ದಬ್ಬಾಳಿಕೆ ಯಂತ್ರಗಳು ಹಾಗೂ ತಂತ್ರಜ್ಞಾನದ ಮೂಲಕ ಆಗುತ್ತಿದೆ. ಸರಳವಾಗಿ ಹೇಳುವುದಾದರೆ ಅಂದು ಮಂತ್ರಗಳ ಮೂಲಕ ನಡೆದಿದ್ದ ಶೋಷಣೆ ಇಂದು ಯಂತ್ರಗಳ ಮೂಲಕ ನಡೆದಿದೆ. ಹಾಗಾಗಿ ಯಂತ್ರಗಳ ಪ್ರಾಮುಖ್ಯತೆಯನ್ನು ಇಷ್ಟಿಷ್ಟೇ ಕಳಚುತ್ತ, ಕಾಯಕ ಕೇಂದ್ರಿತ ಜೀವನಪದ್ಧತಿಯನ್ನು ಪುನರ್ ಸ್ಥಾಪಿಸುವುದು ಇಂದಿನ ಜರೂರಾಗಿದೆ. ಮನುಷ್ಯನ ದುಡಿಮೆಗೆ ಮತ್ತೊಮ್ಮೆ ಬೆಲೆ ಬರುವಂತೆ ಮಾಡುವ ಮೂಲಕ ಮನುಷ್ಯನಿಗೆ ಬೆಲೆ ಬರುವಂತೆ ಮಾಡಬೇಕಿದೆ.

ಸಮಾಜವಾದ, ಸಮತಾವಾದಗಳು ಕೂಡ ಇದೇ ಮಾತನ್ನು ಹೇಳುತ್ತವೆ, ಆದರದು ವೈಯಕ್ತಿಕ ಮನಃಪರಿವರ್ತನೆಗಿಂತ ಮಿಗಿಲಾಗಿ ರಾಜಕೀಯ ಅಧಿಕಾರವನ್ನು ಹಿಡಿಯುವ ಕಡೆಗೆ ಒತ್ತನ್ನು ನೀಡುತ್ತದೆ.

ಯಂತ್ರಯುಗದ ದುಷ್ಪರಿಣಾಮಗಳನ್ನು ಎದುರಿಸಲೆಂದು ರಾಜಕೀಯ ಪಕ್ಷವನ್ನು ಕಟ್ಟುವುದಾಗಲೀ, ಕಾನೂನು ಮಾಡುವುದಾಗಲೀ ಅಥವಾ ಧಾರ್ಮಿಕ ನಿರ್ಬಂಧ ಹೇರುವುದಾಗಲೀ ಈಗಿನ ಸಂದರ್ಭದಲ್ಲಿ ನಿರೀಕ್ಷಿತ ಫಲ ನೀಡಲಾರದು. ಅವೆಲ್ಲವನ್ನೂ ನಾವು ಈಗಾಗಲೇ ಮಾಡಿ ಆಗಿದೆ. ಹಾಗಾಗಿ ಇಂದಿನ ಚಳುವಳಿಯು ವೈಯಕ್ತಿಕ ಸ್ತರದಲ್ಲಿ ನಡೆಯಬೇಕಾದ್ದು, ಹಾಗೂ ಇತ್ಯಾತ್ಮಕವಾದ ಸಾಧನೆಯಾಗಬೇಕಾದ್ದು ಅನಿವಾರ್ಯ. ಪ್ರತಿಯೊಬ್ಬ ವ್ಯಕ್ತಿಯೂ ಸ್ವಇಚ್ಛೆ ಹಾಗೂ ಸ್ವಸಂತೋಷದಿಂದ ತನ್ನ ಬದುಕಿನಲ್ಲಿ ಯಂತ್ರಗಳ ಪ್ರಾಮುಖ್ಯತೆಯನ್ನು ಕಡಿಮೆ ಮಾಡಿಕೊಳ್ಳಬಲ್ಲನಾದರೆ ಆಗ ಮಾತ್ರ ಬದಲಾವಣೆ ಸಾಧ್ಯವಾಗುತ್ತದೆ. ಎಲ್ಲೆಲ್ಲಿ ನಮ್ಮದೇ ಕೈಗಳಿಂದ ಕೆಲಸ ಮಾಡುವುದು ಸಾಧ್ಯವಿದೆಯೋ ಅಥವಾ ಎಲ್ಲೆಲ್ಲಿ ನಮ್ಮದೇ ಕಾಲುಗಳಿಂದ ನಡೆಯುವುದು ಸಾಧ್ಯವಿದೆಯೋ ಅಲ್ಲೆಲ್ಲ ಯಂತ್ರಗಳ ಕೈಕಾಲು ತಪ್ಪಿಸಬೇಕು.

ದುರಂತವೆಂದರೆ ನಾವುಗಳು ದೊಡ್ಡ ಮಾತುಗಳು, ದೊಡ್ಡ ದೊಡ್ಡ ವಿಚಾರಗಳ ಭರದಲ್ಲಿ ದಿನನಿತ್ಯದ ಸಣ್ಣಪುಟ್ಟ ಸಂಗತಿಗಳನ್ನು ಗಮನಿಸುವುದೇ ಇಲ್ಲ. ಆದರೆ ಬದಲಾವಣೆ ಬರಬೇಕೆಂದರೆ ದಿನನಿತ್ಯದ ಈ ಸಣ್ಣಪುಟ್ಟ ಸಂಗತಿಗಳಲ್ಲಿ ಮೊದಲು ಬರಬೇಕು. ಆಗ ಮಾತ್ರ ಅದು ಪರಿಣಾಮವನ್ನು ಬೀರೀತು. ಅಡಿಗೆ ಮಾಡಿಕೊಳ್ಳುವುದಿರಬಹುದು, ಬಾವಿಯಿಂದ ನೀರು ಸೇದುವುದಿರಬಹುದು ಅಥವಾ ಆಫೀಸಿನಲ್ಲಿ ತನ್ನ ಕಾಗದಪತ್ರಗಳನ್ನು ತಾವೇ ತಂದುಕೊಳ್ಳುವುದಿರಬಹುದು … ಇಂತಹ ಸಣ್ಣಪುಟ್ಟ ಸಂಗತಿಗಳು ಕೂಡ 'ಪರಿಸರ ಸ್ನೇಹಿ' ಜೀವನ ಪದ್ಧತಿಯನ್ನು ರೂಪಿಸುವಲ್ಲಿ ಮಹತ್ವದ ಹೆಜ್ಜೆಗಳಾಗಬಲ್ಲದು. ನನ್ನದೇ ಒಂದು ಉದಾಹರಣೆಯನ್ನು ನಾನಿಲ್ಲಿ ಹಂಚಿಕೊಳ್ಳಲು ಬಯಸುತ್ತೇನೆ.

**129.** ಆಧುನಿಕತೆಯ ಪರಿಣಾಮದಿಂದಾಗಿ ಸ್ಥಾಪಿತಗೊಂಡ ಹೊಸ ಮೌಲ್ಯ ಯಾವುದು ?

(1) ವೈಚಾರಿಕತೆ

(2) ನೈತಿಕತೆ

(3) ಮೌಲಿಕತೆ

(4) ವೃತ್ತಿಪರತೆ

**130.** ಭಕ್ತಿ ಚಳುವಳಿಯ ಪ್ರಧಾನ ಆಶಯ :

(1) ವಿನಿಮಯ

(2) ಗಳಿಕೆ

(3) ಕಾಯಕ

(4) ಸಂಗ್ರಹ

**131.** ವರ್ತಮಾನದಲ್ಲಿ 'ದಬ್ಬಾಳಿಕೆ' ಎಂಬುದು ಯಾವುದರ ಮೂಲಕ ನಡೆಯುತ್ತಿದೆ :

(1) ಯಂತ್ರಗಳ ಮೂಲಕ

(2) ಧಾರ್ಮಿಕ ನಂಬಿಕೆಗಳ ಮೂಲಕ

(3) ಶ್ರೇಣೀಕರಣದ ಮೂಲಕ

(4) ಅಧಿಕಾರದ ಮೂಲಕ

**132.** 'ಹೀನಾಯ' ಎಂಬುದು ಯಾವ ಭಾಷೆಯ ಶಬ್ದ :

(1) ಹಿಂದಿ

(2) ಸಂಸ್ಕೃತ

(3) ಪಾರಸಿ

(4) ಅರಬ್ಬಿ

**133.** ಯಂತ್ರಯುಗದ ದುಷ್ಪರಿಣಾಮಗಳನ್ನು ಯಾವುದರಿಂದ ನಿಯಂತ್ರಿಸಬಹುದು :

(1) ವೈಯಕ್ತಿಕ ಇಚ್ಛಾಶಕ್ತಿ

(2) ಧಾರ್ಮಿಕ ಇಚ್ಛಾಶಕ್ತಿ

(3) ರಾಜಕೀಯ ಇಚ್ಛಾಶಕ್ತಿ

(4) ಸಾಮಾಜಿಕ ಇಚ್ಛಾಶಕ್ತಿ

**134.** 'ಜರೂರು' ಶಬ್ದದ ಅರ್ಥ :

(1) ತ್ವರಿತ

(2) ವಿಳಂಬ

(3) ಅಗತ್ಯ

(4) ಅವಸರ

**135.** ಆಧುನಿಕ ಯುಗದ ದುರಂತಕ್ಕೆ ಕಾರಣವೇನು ?

(1) ಕೃಷಿಯ ಬಗೆಗಿನ ಆಸಕ್ತಿ

(2) ಯಂತ್ರಗಳ ಬಾಹುಳ್ಯ

(3) ನೈಸರ್ಗಿಕ ಸಂಪನ್ಮೂಲ ಬಳಕೆ

(4) ತಂತ್ರಜ್ಞಾನ ಬಳಕೆ

**136.** ಒಂದು ವಿಶಾಲ ಓದು (Extensive Reading) ವಿದ್ಯಾರ್ಥಿಗಳ ಆಸಕ್ತಿಯನ್ನು ಈ ಕಡೆಗೆ ಸೆಳೆಯುತ್ತದೆ :


(1) ಅಪರಿಚಿತವಾದ ಪದಗಳ ಅರ್ಥವನ್ನು ಹುಡುಕುವುದು

(2) ಪಠ್ಯದಲ್ಲಿ ಬಳಕೆಯಾದ ವ್ಯಾಕರಣ ಅಂಶಗಳನ್ನು ಹುಡುಕುವುದು

(3) ಪದ್ಯಗಳ ಹೇಳುವಿಕೆ

(4) ಆನಂದಕ್ಕಾಗಿ ಪಠ್ಯವನ್ನು ಓದುವುದು

**137.** ಅಧ್ಯಾಪಿಕೆಯು 'ಲೇಹ್' ಪ್ರದೇಶದ ಬಗ್ಗೆ ಒಂದು ಅಧ್ಯಾಯ ಪ್ರಾರಂಭಿಸುತ್ತಾಳೆ. ಪ್ರಾರಂಭಕ್ಕೆ ಮುನ್ನ ಈ ಪ್ರಸಿದ್ಧ ಸ್ಥಳದ ಬಗ್ಗೆ ಒಂದು ಡ್ರಾಯಿಂಗ್ ಅನ್ನು ಕಪ್ಪು ಹಲಗೆಯ ಮೇಲೆ ಬರೆಯುತ್ತಾಳೆ




ಶಿಕ್ಷಕಿಯು ಬರೆದ ಈ ಚಿತ್ರವು :

(1) ರಾಜ್ಯದ ನಕಾಶೆಯಾಗಿದೆ

(2) ತಾತ್ವಿಕ ನಕಾಶೆಯಾಗಿದೆ (Concept map)

(3) ಆಶಯದ ನಕಾಶೆಯಾಗಿದೆ (Thematic map)

(4) ನಕಾಶೆಯ ಸಾಧನವಾಗಿದೆ (Mapping device)

**138.** ಒಂದು ಬರವಣಿಗೆಯ ಭಾಗವನ್ನು ವಿದ್ಯಾರ್ಥಿಗಳು ಪರಿಣಾಮಕಾರಿಯಾಗಿ ಬರೆಯಲು ಯಾವಾಗ ಕಲಿಯುತ್ತಾರೆ ಅಂದರೆ :

(1) ಶಿಕ್ಷಕಿಯು ವಿದ್ಯಾರ್ಥಿಗಳಿಗೆ ನೇರವಾಗಿ ಹೇಳಿದಾಗ (Dictate)

(2) ಬರವಣಿಗೆಯ ಭಾಗವು ಮಕ್ಕಳ ಇಚ್ಛೆ ಹಾಗೂ ಅರ್ಥಪೂರ್ಣವಾಗುವಂತೆ ಪ್ರಸ್ತುತವಾಗಿದ್ದಾಗ

(3) ಬರವಣಿಗೆಯು ಶಿಕ್ಷಕಿಯ ಇಚ್ಛೆ ಮತ್ತು ಸಂಸ್ಕೃತಿಗೆ ಅನುಗುಣವಾಗಿದ್ದಾಗ

(4) ಮಾತನಾಡಿದ ಧ್ವನಿ ಮತ್ತು ಅದರ ಬರವಣಿಗೆಯ ರೂಪದ ನಡುವೆ ಸಂಬಂಧವಿದ್ದಾಗ

**139.** ಈ ಕೆಳಗಿನವುಗಳಲ್ಲಿ ಯಾವುದು ಸಿದ್ಧಪದಾರ್ಥ ವಿಧಾನ (product approach) ಕುರಿತು ನಿಜವಾದದ್ದಲ್ಲ ?

(1) ಬಹಳವಾಗಿ ಶಿಕ್ಷಕ ಕೇಂದ್ರಿತವಾಗಿದ್ದಾಗ

(2) ವರ್ತನಾ ಮಾದರಿಯ (Behaviorist model) ಮೇಲೆ ಆಧಾರವಾಗಿದ್ದಾಗ

(3) ಸಿದ್ಧವಸ್ತುವಿನ ಮೇಲೆ ಕೇಂದ್ರೀಕರಿಸಿದಾಗ

(4) ವಿಚಾರಗಳ ಉತ್ಪಾದನೆ ಮತ್ತು ಸೃಜನತೆಯ ಮೇಲೆ ಕೇಂದ್ರೀಕರಿಸಿದಾಗ

140. ಪ್ರಕ್ರಿಯಾ ವಿಧಾನಕ್ಕೆ ಸಂಬಂಧಿಸಿದಂತೆ (process approach) ಶಿಕ್ಷಕಿಯು ಬರೆಯುವ ಕೆಲಸವನ್ನು ಪ್ರಾರಂಭಿಸಿದಾಗ ಈ ಕೆಳಗಿನವುಗಳಲ್ಲಿ ಯಾವುದನ್ನು ಬಳಸಬಾರದು ?

(1) ವಿಚಾರ ಮಂಥನ ಮಾಡುವುದು

(2) ಟಿಪ್ಪಣಿಗಳನ್ನು ಹೇಳುವುದು

(3) ಕಚ್ಚಾ ಬರಹ ಮಾಡುವುದು

(4) ಕರಡು ತಿದ್ದುವಿಕೆ

141. ಪಾತ್ರದ ಆಟವು (Role play) ಭಾಷಾ ತರಗತಿಯ ಅನಿವಾರ್ಯ ಅಂಗವಾಗಬೇಕು, ಏಕೆಂದರೆ

(1) ಅದು ವಿದ್ಯಾರ್ಥಿಗಳಿಗೆ ಸ್ವತಂತ್ರವಾಗಿ ಹರಟೆ ಹೊಡೆಯಲು ಅವಕಾಶ ಮಾಡುತ್ತದೆ.

(2) ಅದು ತರಗತಿ ನಿರ್ವಹಣೆಯ ಪರಿಣಾಮಕಾರಿಯಾದ ಉಪಾಯವಾಗಿದೆ.

(3) ಅದು ವಿದ್ಯಾರ್ಥಿಗಳಿಗೆ ಕಥೆಯನ್ನು ನೆನಪಿನಲ್ಲಿಡುವಂತೆ ಮಾಡುತ್ತದೆ.

(4) ಅದು ಅರ್ಥಪೂರ್ಣವಾದ ಭಾಷಾ ವಾಕ್ ಕೆಲಸದಲ್ಲಿ ವಿದ್ಯಾರ್ಥಿಗಳನ್ನು ತೊಡಗುವಂತೆ ಮಾಡುತ್ತದೆ.

142. ವಿದ್ಯಾರ್ಥಿಯನ್ನು ಯಾವುದೇ ವಿಷಯ/ವಸ್ತುವಿನ ಮೇಲೆ ಒಂದು ಚಿಕ್ಕ ಕವನವನ್ನು ಬರೆಯಲು ಹೇಳಿದರೆ ಅವರು ಹೀಗೆ ಯೋಚಿಸುತ್ತಾರೆ :

(1) ಸೃಜನಾತ್ಮಕ ಚಿಂತನೆ

(2) ಸಹಅನುಭೂತಿಯ ಚಿಂತನೆ (empathetic thinking)

(3) ಅನುಕಂಪಮಯ ಚಿಂತನೆ (sympathetic)

(4) ಸಾಂಸ್ಕೃತಿಕ ಚಿಂತನೆ

143. ವಿದ್ಯಾರ್ಥಿಗಳು ಒಳ್ಳೆಯ ಓದುಗರಾಗಲು ಶಬ್ದಕೋಶದ ಬೆಳವಣಿಗೆಯು ಪ್ರಮುಖವಾದ ಕಾರಣವಾಗಿದೆ. ಈ ಕೆಳಗಿನವುಗಳಲ್ಲಿ ಯಾವುದು ಶಬ್ದಕೋಶ ಬೆಳವಣಿಗೆ-ಯನ್ನು ಮಾಡಲು ಒಳ್ಳೆಯ ಉಪಾಯವಾಗಿದೆ ?

(1) ವಿದ್ಯಾರ್ಥಿಗಳು ಬಹುಸಂಖ್ಯೆಯಲ್ಲಿ ಸಮಾನಾರ್ಥಕ ಹಾಗೂ ವಿರುದ್ಧಾರ್ಥಕ ಪದಗಳ ಪಟ್ಟಿಯನ್ನು ಜ್ಞಾಪಕದಲ್ಲಿಡಬೇಕು.

(2) ಹೊಸ ಶಬ್ದವನ್ನು ನೋಡಿದಾಗ ವಿದ್ಯಾರ್ಥಿಗಳು ಶಬ್ದಕೋಶವನ್ನು ನೋಡಬೇಕು.

(3) ಒಂದು ಪಠ್ಯದಲ್ಲಿನ ಕಠಿಣ ಪದವನ್ನು ಗುರುತು ಮಾಡಿಕೊಂಡು, ಅದನ್ನು ಉಪಯೋಗಿಸಿ ವಾಕ್ಯವನ್ನು ರೂಪಿಸಬೇಕು.

(4) ಹೊಸ ಪದಗಳ ಅರ್ಥವನ್ನು ಊಹಿಸಲು ವಿದ್ಯಾರ್ಥಿಗಳು ಅದು ಬಳಕೆಯಾದ ಸಂದರ್ಭವನ್ನು ಉಪಯೋಗಿಸಲು ಕಲಿಯಬೇಕು.

144. ಒಂದು ಮಗುವಿನ ಜೀವನದ ಗುರುತರವಾದ ಘಟನೆಯನ್ನು ಒಬ್ಬ ಶಿಕ್ಷಕಿಯು ಗುರುತಿಸಿ, ಒಂದು ಸಂಕಥನ ರೂಪದ ಬರವಣಿಗೆಗಳು ಅಥವಾ ದಾಖಲೆಗಳನ್ನು ಮಾಡುತ್ತಾಳೆ. ಇಂಥ ದಾಖಲೆಯನ್ನು ಹೀಗೆ ಕರೆಯುತ್ತಾರೆ

(1) ಶೀರ್ಷಿಕಾ ಬರಹ (Rubrics)

(2) ಪೋರ್ಟ್ ಫೋಲಿಯೊ

(3) ಸೂಕ್ಷ್ಮಗ್ರಹಿಕೆ (Observation)

(4) ಉಪಾಖ್ಯಾನದ ದಾಖಲೆ (anecdotal record)

**145.** ಈ ಕೆಳಗಿನವುಗಳಲ್ಲಿ ಯಾವುದು ಯಶಸ್ವಿಯಾದ ಮಾತಿನ ಚಟುವಟಿಕೆಯ ಗುಣವಾಗಿದೆ ?

(1) ಮಕ್ಕಳ ಅಸಮರ್ಪಕವಾದ ಭಾಗವಹಿಸುವಿಕೆ.

(2) ಮಕ್ಕಳಿಗೆ ಮಾತನಾಡುವ ಅವಕಾಶ ಒದಗಿಸುವ ಚಟುವಟಿಕೆ.

(3) ಕೇವಲ ಉದ್ದೇಶಿತ ಭಾಷೆಯಲ್ಲಿಯೇ ವಿದ್ಯಾರ್ಥಿಗಳು ಮಾತನಾಡುವಂತೆ ಮಾಡುವುದು.

(4) ಪರಿಣಾಮಕಾರಿಯಾದ ತರಗತಿಯ ನಿರ್ವಹಣೆಗಾಗಿ, ಗಮನವನ್ನು ಬಯಸುವ ವಿದ್ಯಾರ್ಥಿಗಳು ಹೆಚ್ಚು ಮಾತನಾಡಲು ಅವಕಾಶ ಮಾಡುವುದು.

**146.** ವೈಗೋಸ್ಕಿಯ ಪ್ರಕಾರ ಭಾಷೆಯನ್ನು ಕಲಿಯಲು ______ ಅತ್ಯಂತ ಅವಶ್ಯಕವಾದ ಭಾಗವಾಗಿದೆ.

(1) ಸಾಮಾಜಿಕ ಒಡನಾಟ

(2) ಪಠ್ಯಪುಸ್ತಕ

(3) ರೇಡಿಯೋ

(4) ಶಬ್ದಕೋಶ

**147.** ಮಾತನಾಡುವ ಕೌಶಲ್ಯಗಳ ಅಭ್ಯಾಸಕ್ಕೆ ಯಾವ ಚಟುವಟಿಕೆಯು ಹೆಚ್ಚು ಸಹಾಯ ಮಾಡುತ್ತದೆ ?

(1) ಒಂದು ವಿಷಯದ ಮೇಲೆ ವಿದ್ಯಾರ್ಥಿಗಳು ಸಣ್ಣ ಔಪಚಾರಿಕವಾದ ಪ್ರಸ್ತುತಿಯನ್ನು ಮಾಡಬೇಕು.

(2) ಶಿಕ್ಷಕಿಯು ಉದ್ದೇಶಪೂರ್ವಕ ಉತ್ಕಲನವನ್ನು ವಿದ್ಯಾರ್ಥಿಗಳಿಗೆ ಕೊಡುವುದು.

(3) ವಿದ್ಯಾರ್ಥಿಗಳು ಅವರಿಗೆ ಕೊಟ್ಟ ಕಥೆಯ ಹೊಳಹಿನ ಮೇಲೆ, ಅವರದೇ ಆದ ಒಂದು ಅವತರಣಿಕೆಯನ್ನು ಹೇಳುವುದು.

(4) ವಿದ್ಯಾರ್ಥಿಗಳು ಒಳ್ಳೆಯ ಪ್ರಾಜೆಕ್ಟ್ ರಿಪೋರ್ಟ್ ಅನ್ನು ತಯಾರು ಮಾಡುವುದು.

**148.** ಓದಿನ ಯಾವ ಘಟ್ಟವು ವಿದ್ಯಾರ್ಥಿಗಳನ್ನು ಅವರ ಹಿಂದಿನ ಜ್ಞಾನದ ಜೊತೆಗೆ ಹಾಗೂ ಹೊಸದಾಗಿ ಅರ್ಜಿಸಿಕೊಂಡ ಜ್ಞಾನದ ಜೊತೆಗೆ ಹಾಗೂ ತರಗತಿಯ ಆಚೆಯ ಜಗತ್ತಿನೊಡನೆ ಜೋಡಿಸುವಂತೆ ಮಾಡುತ್ತದೆ ?

(1) ಪೂರ್ವ ಓದು (pre-reading)

(2) ಓದುವ ಸಂದರ್ಭ (while reading)

(3) ಓದುವ ಮೊದಲು (before reading)

(4) ಓದಿನ ನಂತರ (post reading)

**149.** ಜ್ಞಾನ ವಿಷಯಕ ಪಂಡಿತರ (cognitivist) ಪ್ರಕಾರ ವಿದ್ಯಾರ್ಥಿಗಳು ಭಾಷೆಯನ್ನು ಈ ಸಂದರ್ಭದಲ್ಲಿ ಪರಿಣಾಮಕಾರಿಯಾಗಿ ಕಲಿಯುತ್ತಾರೆ

(1) ತರಗತಿಯು ಶಿಕ್ಷಕಳ ಹಿಡಿತಕ್ಕೆ ಒಳಪಟ್ಟಿರುತ್ತದೆ ಮತ್ತು ಅವಳು ವಿದ್ಯಾರ್ಥಿಗಳಿಗೆ ಯಾವ ಅವಕಾಶವನ್ನು ಕೊಡುವುದಿಲ್ಲ.

(2) ಶಿಕ್ಷಕಳು ವ್ಯಾಕರಣದ ನಿಯಮಗಳನ್ನು ಜ್ಞಾಪಕದಲ್ಲಿಡುವಂತೆ ಮಕ್ಕಳನ್ನು ಉತ್ತೇಜಿಸುತ್ತಾಳೆ.

(3) ವಿದ್ಯಾರ್ಥಿಗಳು ಬ್ಲಾಕ್ ಬೋರ್ಡ್‌ನಿಂದ ಉತ್ತರಗಳನ್ನು ಕಾಪಿ ಮಾಡುತ್ತಾರೆ.

(4) ಶಿಕ್ಷಕಿಯು ವಿದ್ಯಾರ್ಥಿಗಳನ್ನು, ವಿವಿಧ ಕೌಶಲ್ಯಗಳನ್ನು ಆಧರಿಸಿದ ಚಟುವಟಿಕೆಗಳು ಮತ್ತು ಕೆಲಸಗಳಲ್ಲಿ ಭಾಗವಹಿಸುವಂತೆ ಉತ್ತೇಜಿಸುತ್ತಾಳೆ.

**150.** ಒಳ್ಳೆಯ ಕೇಳುಗನು –

(1) ಒಂದು ಪದವನ್ನು ಹೇಗೆ ಮಾತನಾಡ-ಬಹುದೆಂದು ತಿಳಿಯುತ್ತಾನೆ.

(2) ಒಂದು ಉದ್ದೇಶವು ಹೇಗೆ ಬಳಸಲ್ಪಡುತ್ತದೆ ಎಂದು ಗುರುತಿಸುತ್ತಾನೆ.

(3) ಕೇಳಿದ ಪ್ರಶ್ನೆಗಳಿಗೆ ಸರಿಯಾಗಿ ಪ್ರತಿಕ್ರಿಯಿಸುತ್ತಾನೆ.

(4) ಪ್ರತಿಯೊಂದು ಪದವನ್ನು ಸರಿಯಾಗಿ ಉಚ್ಚರಿಸುತ್ತಾನೆ.

# SPACE FOR ROUGH WORK

**ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ವಿಧಾನವನ್ನು ಕೊಡಲಾಗಿರುವ ಪ್ರಶ್ನೆಪತ್ರಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ, ಉತ್ತರಿಸುವ ಮುನ್ನ ಸೂಚನೆಗಳನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಬೇಕು.
2. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ ಪುಟ-2 ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ ನೀಲಿ ಕಪ್ಪು / ಬಾಲ್ ಪಾಯಿಂಟ್ ಪೆನ್ ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
3. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
4. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿ ಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತು ಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
5. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
6. OMR ಉತ್ತರಪತ್ರಿಕೆಯಲ್ಲಿ ಸಂಕೇತಿಸಿದ ಮಾಹಿತಿಗಳನ್ನು ಗಣಕಯಂತ್ರವು ಓದುತ್ತದೆ. ಆದ್ದರಿಂದ ಯಾವುದೇ ಮಾಹಿತಿಗಳನ್ನು ಅಪೂರ್ಣಕೊಳಿಸಕೂಡದು ಮತ್ತು ಪ್ರವೇಶಪತ್ರದಲ್ಲಿರುವ ಮಾಹಿತಿಗೆ ಅದು ಭಿನ್ನವಾಗಬಾರದು.
7. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ, ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
8. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್, ವೈರ್ ಲೆಸ್ ಸಂಪರ್ಕ ಉಪಕರಣಗಳನ್ನು ಮತ್ತಿತರ ನಿಷೇಧಿತ ವಸ್ತುಗಳನ್ನು ತರಬಾರದು, ಇದನ್ನು ಮೀರಿ ನಡೆದಲ್ಲಿ ಅಥವಾ ಉಲ್ಲಂಘಿಸಿದರೆ ಆ ಅಭ್ಯರ್ಥಿಗಳು ಶಿಕ್ಷಾರ್ಹರಾಗುತ್ತಾರೆ ಮತ್ತು ಅವರನ್ನು ಪರೀಕ್ಷೆಯಿಂದ ಹೊರಹಾಕಲೂಬಹುದು.
9. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್ ನ್ನು ನಿರೀಕ್ಷಕರಿಗೆ ತೋರಿಸಬೇಕು.
10. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
11. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರೀ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್ ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು.
12. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (calculator) ಉಪಯೋಗ ನಿಷೇಧಿಸಲಾಗಿದೆ.
13. ಪರೀಕ್ಷಾ ಹಾಲ್ ನಲ್ಲಿ, ಪರೀಕ್ಷಾರ್ಥಿ ಬೋರ್ಡ್ ನ ಎಲ್ಲಾ ನೀತಿ ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್ ನ ನೀತಿ-ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
14. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
15. ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.

**निम्नलिखित निर्देशों को ध्यान से पढ़ें :**

1. जिस प्रकार से विभिन्न प्रश्नों के उत्तर दिए जाने हैं उसका वर्णन परीक्षा पुस्तिका में किया गया है, जिसे आप प्रश्नों का उत्तर देने से पहले ध्यान से पढ़ लें ।
2. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के **पृष्ठ-2** पर केवल एक वृत्त को ही पूरी तरह **काले/नीले बॉल पॉइन्ट पेन** से भरें । एक बार उत्तर अंकित करने के बाद उसे बदला नहीं जा सकता है ।
3. परीक्षार्थी सुनिश्चित करें कि इस उत्तर पत्र को मोड़ा न जाए एवं उस पर कोई अन्य निशान न लगाएँ । परीक्षार्थी अपना अनुक्रमांक उत्तर-पत्र में निर्धारित स्थान के अतिरिक्त अन्यत्र न लिखें ।
4. परीक्षा पुस्तिका एवं उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर पत्र के संकेत या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी ।
5. परीक्षा पुस्तिका / उत्तर पत्र में दिए गए परीक्षा पुस्तिका संकेत व संख्या को परीक्षार्थी सही तरीके से हाज़िरी-पत्र में लिखें ।
6. OMR उत्तर पत्र में कोडित जानकारी को एक मशीन पढ़ेगी । इसलिए कोई भी सूचना अधूरी न छोड़ें और यह प्रवेश-पत्र में दी गई सूचना से भिन्न नहीं होनी चाहिए ।
7. परीक्षार्थी द्वारा परीक्षा हॉल/कक्ष में प्रवेश-पत्र के सिवाय किसी प्रकार की पाठ्य-सामग्री, मुद्रित या हस्तलिखित, कागज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है ।
8. मोबाइल फोन, बेतार संचार युक्तियाँ (स्वीच ऑफ अवस्था में भी) और अन्य प्रतिबंधित वस्तुएँ परीक्षा हॉल/कक्ष में नहीं लाई जानी चाहिए । इस सूचना का पालन न होने पर इसे परीक्षा में अनुचित साधनों का प्रयोग माना जाएगा और उनके विरुद्ध कार्यवाही की जाएगी, परीक्षा रद्द करने सहित ।
9. पूछे जाने पर प्रत्येक परीक्षार्थी, निरीक्षक को अपना प्रवेश-पत्र दिखाएँ ।
10. केन्द्र अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें ।
11. कार्यरत निरीक्षक को अपना उत्तर पत्र दिए बिना एवं हाज़िरी-पत्र पर दुबारा हस्ताक्षर किए बिना परीक्षार्थी परीक्षा हॉल/कक्ष नहीं छोड़ेंगे । यदि किसी परीक्षार्थी ने दूसरी बार हाज़िरी-पत्र पर हस्ताक्षर नहीं किए, तो यह माना जाएगा कि उसने उत्तर पत्र नहीं लौटाया है और यह अनुचित साधन का मामला माना जाएगा । **परीक्षार्थी अपने बाएँ हाथ के अंगूठे का निशान हाज़िरी-पत्र में दिए गए स्थान पर अवश्य लगाएँ ।**
12. इलेक्ट्रॉनिक / हस्तचालित परिकलक का उपयोग वर्जित है ।
13. परीक्षा हॉल/कक्ष में आचरण के लिए परीक्षार्थी बोर्ड के सभी नियमों एवं विनियमों द्वारा नियमित हैं । अनुचित साधनों के सभी मामलों का फैसला बोर्ड के नियमों एवं विनियमों के अनुसार होगा ।
14. किसी हालत में परीक्षा पुस्तिका और उत्तर पत्र का कोई भाग अलग न करें ।
15. **परीक्षा सम्पन्न होने पर, परीक्षार्थी हॉल / कक्ष छोड़ने से पूर्व उत्तर पत्र कक्ष-निरीक्षक को अवश्य सौंप दें । परीक्षार्थी अपने साथ इस परीक्षा पुस्तिका को ले जा सकते हैं ।**

**READ THE FOLLOWING INSTRUCTIONS CAREFULLY:**

1. The manner in which the different questions are to be answered has been explained in the Test Booklet which you should read carefully before actually answering the questions.
2. Out of the four alternatives for each question, only one circle for the correct answer is to be darkened completely with **Black/Blue Ball Point Pen** on **Side-2** of the OMR Answer Sheet. The answer once marked is not liable to be changed.
3. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
4. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
5. The candidates will write the correct Test Booklet Code and Number as given in the Test Booklet / Answer Sheet in the Attendance Sheet.
6. A machine will read the coded information in the OMR Answer Sheet. Hence, no information should be left incomplete and it should not be different from the information given in the Admit Card.
7. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/ room.
8. Mobile phones, wireless communication devices (even in switched off mode) and the other banned items should not be brought in the examination halls/ rooms. Failing to comply with this instruction, it will be considered as using unfair means in the examination and action will be taken against them including cancellation of examination.
9. Each candidate must show on demand his / her Admit Card to the Invigilator.
10. No candidate, without special permission of the Centre Superintendent or Invigilator, should leave his / her seat.
11. The candidates should not leave the Examination Hall/ Room without handing over their Answer Sheet to the Invigilator on duty and sign the Attendance Sheet twice. Cases where a candidate has not signed the Attendance Sheet second time will be deemed not to have handed over the Answer Sheet and dealt with as an unfair means case. **The candidates are also required to put their left hand THUMB impression in the space provided in the Attendance Sheet.**
12. Use of Electronic / Manual Calculator is prohibited.
13. The candidates are governed by all Rules and Regulations of the Board with regard to their conduct in the Examination Hall/Room. All cases of unfair means will be dealt with as per Rules and Regulations of the Board.
14. No part of the Test Booklet and Answer Sheet shall be detached under any circumstances.
15. **On completion of the test, the candidate must hand over the Answer Sheet to the Invigilator in the Hall / Room.** ***The candidates are allowed to take away this Test Booklet with them.***